# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 03, 2022

ಸಂಪುಟ : 49 ಸಂಚಿಕೆ : 111 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





ಮೊದಲ ದೇಶೀಯ ವಿಮಾನವಾಹಕ ಲೋಕಾರ್ಪಣೆ

# ವಿಮಾನವಾಹಕ ಉತ್ಪಾದನಾ ಸಾಮರ್ಥ್ಯದ ಕೆಲವೇ ದೇಶಗಳ ಸಾಲಿಗೆ ಭಾರತವೂ ಸೇರ್ಪಡೆ

ಕೊಚ್ಚಿ, ಸೆ. 2 – ದೇಶೀಯವಾಗಿ ರೂಪಿಸಲಾದ ಮೊದಲ ವಿಮಾನವಾಹಕ ನೌಕೆ ಐ.ಎನ್.ಎಸ್. ವಿಕ್ರಾಂತ್ ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಲೋಕಾರ್ಪಣೆ ಮಾಡಿದ್ದಾರೆ. ದೇಶೀಯವಾಗಿ ವಿಮಾನವಾಹಕ ಉತ್ಪಾದಿಸುವ ಕೆಲವೇ ದೇಶಗಳಲ್ಲಿ ಭಾರತ ಸಹ ಒಂದಾಗಿದೆ.



ಪ್ರಧಾನಿ ಇದೇ ವೇಳೆ ನೌಕಾ ದಳದ ಹೊಸ ಚಿಹ್ನೆಯನ್ನೂ ಅನಾವರಣಗೊಳಿಸಿದ್ದಾರೆ. ಈ ಚಿಹ್ನೆಯು ಛತ್ರಪತಿ ಶಿವಾಜಿ ಮಹಾರಾಜರಿಂದ ಸ್ಫೂರ್ತಿ ಪಡೆದಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, ದೇಶವು ಗುಲಾಮಗಿರಿಯ ಹೊರೆಯಿಂದ ಹೊರ ಬಂದಿದೆ. ವಿಕ್ರಾಂತ್ ವಿಶಿಷ್ಟವಾಗಿದೆ, ವಿಕ್ರಾಂತ್ ವಿಶೇಷವಾಗಿದೆ. ಇದು ಸಮರ ನೌಕೆಯಷ್ಟೇ ಅಲ್ಲದೇ, ಭಾರತದ ಕೌಶಲ್ಯ ಹಾಗೂ ಪ್ರತಿಭೆಗೆ ಹಿಡಿದ ಸಾಣೆಯೂ ಆಗಿದೆ ಎಂದಿದ್ದಾರೆ.

ಹಡಗಿನ ವೈಶಿಷ್ಟ್ಯತೆಗಳ ಕುರಿತು ಮಾತನಾಡಿದ ಪ್ರಧಾನಿ, ಇದು ತೇಲುವ ಸಮರ ಕ್ಷೇತ್ರವಾಗಿದೆ. ಇದು ತೇಲುವ ನಗರವಾಗಿದೆ. ಇದರಲ್ಲಿ 5,000 ಮನೆಗಳ ಬೆಳಗುವಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ ಎಂದು ತಿಳಿಸಿದರು.

ಲೋಕಾರ್ಪಣಾ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ನೌಕಾ ದಳದ ಮುಖ್ಯಸ್ಥ ಆರ್. ಹರಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅಮೆರಿಕ, ಬ್ರಿಟನ್, ರಷ್ಯಾ, ಚೀನ ಹಾಗೂ ಫ್ರಾನ್ಸ್‌ಗಳು ಮಾತ್ರ ದೇಶೀಯವಾಗಿ ವಿಮಾನವಾಹಕ ನೌಕೆಯನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ.

262 ಮೀಟರ್ ಉದ್ದ ಹಾಗೂ 62 ಮೀಟರ್ ಅಗಲದ ವಿಮಾನ ವಾಹಕ 43 ಸಾವಿರ ಟನ್‌ಗಳ ತೂಕದ್ದಾಗಿದೆ. ಇದು 28 ನಾಟ್ ವೇಗದಲ್ಲಿ ಚಲಿಸಬಲ್ಲದು. ಇದರ ವೆಚ್ಚ 20 ಸಾವಿರ ಕೋಟಿ ರೂ.ಗಳಾಗಿದೆ.

# ನೊಂದವರಿಗೆ, ನಿರಾಶ್ರಿತರಿಗೆ ಬೆಳಕಾಗಿರುವ ಸುದೀಪ್

## ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಶ್ಲಾಘನೆ

ಹರಪನಹಳ್ಳಿ, ಸೆ. 2- ಭಾರತೀಯ ಚಿತ್ರರಂಗದ ಲೆಜೆಂಡ್, ಕರುನಾಡಿನ ನೆಲ, ಜಲ ಭಾಷೆಯನ್ನು ಉತ್ತುಂಗಕ್ಕೆ ಬೆಳೆಸುವ ಕರುನಾಡ ಕಿಚ್ಚ ಸುದೀಪ ಅವರು ನೊಂದವರಿಗೆ, ನಿರಾಶ್ರಿತರಿಗೆ ಬೆಳಕಾಗಿದ್ದಾರೆ ಎಂದು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಹೇಳಿದರು.

ಪಟ್ಟಣದ ಹಳೇಬಸ್ ನಿಲ್ದಾಣದಲ್ಲಿ ಏಕಲವ್ಯ ಸಂಘರ್ಷ ಸಮಿತಿ ವತಿಯಿಂದ ಕಿಚ್ಚ ಸುದೀಪ್ ಹುಟ್ಟು ಹಬ್ಬದ ಪ್ರಯುಕ್ತ ರಕ್ತದಾನ ಶಿಬಿರ, ಅನ್ನ ಸಂತರ್ಪಣೆ ಹಾಗೂ ಬಡಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೋವಿಡ್ ಸಂಕಷ್ಟದ ಸಮಯದಲ್ಲಿ ಸಹಾಯ ಮಾಡುವ ಮೂಲಕ ಅಭಿಮಾನಿ ಸ್ನೇಹಿತರಿಗೆ ರಾಜ್ಯದ ಜನತೆಗೆ ಆದರ್ಶವ್ಯಕ್ತಿಯಾಗಿದ್ದಾರೆ ಎಂದರು.

ಪುರಸಭೆ ಅಧ್ಯಕ್ಷ ಹಾರಳು ಅಶೋಕ ಮಾತನಾಡಿ, ಸುದೀಪ್, ಕನ್ನಡ ಚಿತ್ರ ರಂಗದಲ್ಲಿ ನಾಯಕ ನಟನಾಗಿ, ಖಳನಾಯಕನಾಗಿ, ನಿರ್ಮಾಪಕನಾಗಿ, ಪರಿಪೂರ್ಣ ನಟ ಎಂದರೆ ಅತಿಶೋಕ್ತಿಯಲ್ಲ ಇವರು ಇನ್ನು ಉತ್ತುಂಗ ಶಿಖರಕ್ಕೆ ಏರಲಿ ಎಂದರು.




ಜಗಳೂರಿನ ಯುವ ಮುಖಂಡ ನಿಜಲಿಂಗಪ್ಪ. ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ, ಬಿಜೆಪಿ ಎಸ್.ಟಿ. ಘಟಕದ ಅಧ್ಯಕ್ಷ ಟಿ. ಮನೋಜ ಮಾತನಾಡಿ, ಕನ್ನಡ ಚಿತ್ರರಂಗವಲ್ಲದೆ ಪರಭಾಷೆ ಚಿತ್ರಗಳಲ್ಲಿ ಮಿಂಚಿದ ಕೀರ್ತಿ ಸುದೀಪ್‌ಗೆ ಸಲ್ಲುತ್ತದೆ ಎಂದರು.


ಏಕಲವ್ಯ ಸಂಘರ್ಷ ಸಮಿತಿ ಕಾರ್ಯದರ್ಶಿ ರಂಗಾಪುರ ಶಿವರಾಜ, ವಾಲ್ಮೀಕಿ ನಾಯಕ ಸಮಾಜದ ಕಾರ್ಯದರ್ಶಿ ಜಿ. ನಾಗರಾಜ, ರಾಣೆಬೆನ್ನೂರು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಚಂದ್ರಪ್ಪ ಬೇಡರ್, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ವಕೀಲರಾದ ಕೆ.ಎಂ. ಪ್ರಾಣೇಶ, ಟಿ. ವಸಂತರಾಜ್, ತೆಲಗಿ ಪ್ರವೀಣ, ಮುಖಂಡರಾದ ಆರ್. ಲೋಕೇಶ, ನೀಲಗುಂದ ತಿಮ್ಮೇಶ್, ಅಣ್ಣಪ್ಪ, ಎಚ್. ಬಾಲಾಜಿ, ಸಾಸ್ವಿಹಳ್ಳಿ ನಾಗರಾಜ ಉಪಸ್ಥಿತರಿದ್ದರು.



## ಶಿರಮನಹಳ್ಳಿಯಲ್ಲಿ ಸಂಭ್ರಮದ ಗಣೇಶೋತ್ಸವ

ಶಿರಮಗೊಂಡನಹಳ್ಳಿಯ ಶ್ರೀ ಸಿದ್ದಿವಿನಾಯಕ ಗೆಳೆಯರ ಬಳಗದಿಂದ ಗಣೇಶೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

## ಲಕ್ಷ್ಮಣರಾವ್ ಕುಸ್ತಿಯಲ್ಲಿ ಪ್ರಥಮ



ದಾವಣಗೆರೆ, ಸೆ. 2- ನೇಪಾಳದ ಯೂತ್ಸ್ ಅಂಡ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಆರ್ಗನೈಸೇಷನ್‌ನಿಂದ ಈಚೆಗೆ ಏರ್ಪಡಿಸಲಾಗಿದ್ದ ಇನ್ವಿಟೇಷನಲ್ ಇಂಟರ್‌ನ್ಯಾಷನಲ್ ಚಾಂಪಿಯನ್ ಶಿಪ್ 2022 ಸ್ಪರ್ಧೆಯಲ್ಲಿ ಲಕ್ಷ್ಮಣರಾವ್ ಸಾಳಂಕಿ ಅವರು 65 ವರ್ಷ ವಯಸ್ಸಿನ ಮೇಲ್ಪಟ್ಟ ಯೋಗ ಸ್ಪರ್ಧೆ ಪ್ರಥಮ ಹಾಗೂ ಕುಸ್ತಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

## ಯೋಗ ಸ್ಪರ್ಧೆ : ವಿಕಾಸ್ ಆಯ್ಕೆ



ದಾವಣಗೆರೆ, ಸೆ.2- ನಗರದಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ಯೋಗ ಸ್ಪರ್ಧೆಯಲ್ಲಿ ಕುರ್ಕಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಕೆ.ಪಿ. ವಿಕಾಸ್ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ಬೆಂಗಳೂರು ವಿಭಾಗೀಯ ಮಟ್ಟದ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ. ವಿಕಾಸ್ ಆಯ್ಕೆಗೆ ದೈಹಿಕ ಶಿಕ್ಷಕ ಎ.ಆರ್. ರಾಘವೇಂದ್ರ ಅವರ ಮಾರ್ಗದರ್ಶನವೂ ಸಹಕಾರಿಯಾಗಿದೆ ಎಂದು ಶಾಲಾ ಮುಖ್ಯೋಪಾಧ್ಯಾಯ ಗಣೇಶಾಚಾರಿ ಆರ್. ಸಂತೋಷ ವ್ಯಕ್ತ ಪಡಿಸಿದ್ದಾರೆ.

## ಇಂಪೀರಿಯಲ್ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ

ದಾವಣಗೆರೆ, ಸೆ. 2- ನಗರದ ಇಂಪೀರಿಯಲ್ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಯನ್ನು ಆಚರಿಸಲಾಯಿತು. ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಚೇತನ ವಿದ್ಯಾಸಂಸ್ಥೆಯ ಅಧ್ಯಕ್ಷ ಕೆ.ಎನ್. ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಮಂಜುಳಾ ಓಂಕಾರಪ್ಪ, ಮುಖ್ಯೋಪಾಧ್ಯಾಯ ರೋಷನ್ ಕುಮಾರ್, ವ್ಯವಸ್ಥಾಪಕ ಎಸ್.ಬಿ. ಜಗದೀಶ್ ಭಾಗವಹಿಸಿದ್ದರು.

# ನೆಲ-ಜಲ ಸಂಕಷ್ಟದಲ್ಲಿ ರಕ್ಷಣೆಗೆ ಬದ್ಧರಾಗಿರಬೇಕು

## ಹರಿಹರ: ವಿದ್ಯಾರ್ಥಿಗಳಿಗೆ ಕ.ಸಾ.ಪ. ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ್ ಕರೆ



ಹರಿಹರ, ಸೆ.2 - ವಿದ್ಯಾರ್ಥಿಗಳು ಕನ್ನಡ ನೆಲ, ಜಲ, ಭಾಷೆ, ಗಡಿ, ಸಂಸ್ಕೃತಿಗೆ ಸಂಕಷ್ಟದ ಸ್ಥಿತಿ ಬಂದ ಸಮಯದಲ್ಲಿ ಒಗ್ಗಟ್ಟಿನಿಂದ ರಕ್ಷಣೆಗೆ ಬದ್ಧರಾಗಿರಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಸ್. ಹೆಚ್.ಹೂಗಾರ್ ಕರೆ ನೀಡಿದರು.

ತಾಲ್ಲೂಕಿನ ಬಿಳಸನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಚಂದ್ರಶೇಖರ ಶೆಟ್ಟಿ , ಲಲಿತಮ್ಮ ಡಾ.ಚಂದ್ರಶೇಖರ್, ಜಿ.ಎಂ.ಮಲ್ಲಿಕಾರ್ಜುನ ಸ್ವಾಮಿ ದತ್ತಿ ಉಪನ್ಯಾಸ ಹಾಗೂ ಶಾಲಾ ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರಿ ಉದ್ಯೋಗ ಪಡೆಯಲು ಮಾತ್ರ ಶಿಕ್ಷಣ ಪಡೆಯದೇ, ವಿದ್ಯಾರ್ಥಿ ಗಳು ಮುಂದೆ ಸ್ವಂತ ಉದ್ಯಮ ಸ್ಥಾಪಿಸಿ, ನಾಡಿನ ಜನರಿಗೆ ಉದ್ಯೋಗದಾತರಾಗಬೇಕು. ಉತ್ತಮ ಶಿಕ್ಷಣ ಪಡೆದು, ಸಮಾಜದಲ್ಲಿ ಉನ್ನತ ಸ್ಥಾನ ಪಡೆದ ವಿದ್ಯಾರ್ಥಿಗಳು ತಂದೆ, ತಾಯಿ, ಗುರು ಹಾಗೂ ಸಮಾಜದ ಋಣ ತೀರಿಸಲು ಮರೆಯಬಾರದು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಂದಿಗಾವಿ ಗ್ರಾ.ಪಂ. ಮಾಜಿ ಅಧ್ಯಕ್ಷ ಎ.ಎನ್. ರಾಜಣ್ಣ, ಕನ್ನಡ ಭಾಷೆಯ ಬಗ್ಗೆ ಗ್ರಾಮಾಂತರ ಪ್ರದೇಶದ ಜನರಿಗೆ ಅರಿವಿದೆ. ಆದರೆ ಸಾಹಿತ್ಯದ ಪರಿಚಯವಿಲ್ಲ. ಇಂತಹ ಕಾರ್ಯಕ್ರಮಗಳ ಮೂಲಕ ಅವರಿಗೆ ಸಾಹಿತ್ಯದ ಪರಿಚಯವಾಗಲಿ ಎಂದು ಆಶಿಸಿದರು.

ಹವ್ಯಾಸಿ ಬರಹಗಾರರಾದ ಕುಂದೂರು ಮಂಜಪ್ಪ ಮಾತನಾಡಿ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಬಿಳಸನೂರು ಗ್ರಾಮದ ವೈ.ತಿಮ್ಮಪ್ಪ, ವಿ. ಬಸಪ್ಪ ರೆಡ್ಡಿ, ಬಿ. ರಂಗಪ್ಪ ರೆಡ್ಡಿ, ಬಿ.ಜಿ.ಕೊಟ್ರಪ್ಪ ಇವರ ದೇಶ ಸೇವೆಯನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯ ಶಿಕ್ಷಕ ಕೆ.ಆರ್.ವಿಶ್ವನಾಥ ವಹಿಸಿದ್ದರು. ಇದೇ ಸಂದರ್ಭದಲ್ಲಿ ಹವ್ಯಾಸಿ ಬರಹಗಾರರು ಮತ್ತು ಪ್ರಗತಿಪರ ಕೃಷಿಕರಾದ ಹೊಳೆಸಿರಿಗೆರೆಯ ಕುಂದೂರು ಮಂಜಪ್ಪನವರನ್ನು ಸನ್ಮಾನಿಸಲಾಯಿತು.

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕೊಡುಗೆಗಳು ಎಂಬ ವಿಷಯದ ಬಗ್ಗೆ ಆಯೋಜಿಸಿದ್ದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ಚಂದ್ರಕಲಾ ಬಿ.ಎಂ., ಸಾನಿಕ, ಕೆ.ಪವನ ಇವರಿಗೆ ಬಹುಮಾನ ವಿತರಿಸಲಾಯಿತು.

ವೇದಿಕೆಯಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗರಾಜಾಚಾರಿ, ನಾಮನಿರ್ದೇಶಿತ ಸದಸ್ಯರಾದ ರಾಜು ಎನ್., ಮಂಜುನಾಥ ರೆಡ್ಡಿ, ಕಸಾಪ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ, ಸಂಘಟನಾ ಕಾರ್ಯದರ್ಶಿ ಕೋಡಿಹಳ್ಳಿ ನಾಗರಾಜಗೌಡ, ಸದಸ್ಯ ಕೆ.ಎಸ್.ಅಬ್ದುಲ್ ಸಲಾಂ, ಶಿಕ್ಷಕರಾದ ಶಂಕರಪ್ಪ ಲಮಾಣಿ, ಕುಸುಮ ಕಪ್ಪಲಿ, ರೇಖಾ, ನಾಗರಾಜ ಮತ್ತಿತರರು ಉಪಸ್ಥಿತರಿದ್ದರು.

## ಹಿಂದೂ ಯುವ ಶಕ್ತಿ ವತಿಯಿಂದ ಚಿತ್ರಕಲಾ ಸ್ಪರ್ಧೆ




ದಾವಣಗೆರೆ, ಸೆ. 2 - ಹಿಂದೂ ಯುವ ಶಕ್ತಿ ಎಂ.ಸಿ ಕಾಲೋನಿ 'ಎ' ಬ್ಲಾಕ್ ನವರ ವತಿಯಿಂದ ಗಣೇಶೋತ್ಸವದ ಅಂಗವಾಗಿ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಪ್ಲೇ ಗ್ರೂಪ್ ನಿಂದ ಯುಕೆಜೆ, 1ರಿಂದ 4ರವರೆಗೆ, 5ರಿಂದ 7ರವರೆಗೆ ಹಾಗೂ 8ರಿಂದ 10ನೇ ತರಗತಿಯವರೆಗೆ ಚಿತ್ರಕಲಾ ಸ್ಪರ್ಧೆ ಯನ್ನು ದಿನಾಂಕ 4ರ ಭಾನುವಾರ ಬೆಳಿಗ್ಗೆ 11 ರಿಂದ 1ರವರೆಗೆ ತೊಗಟವೀರ ಸಮುದಾಯ ಭವನದ ಆವರಣದಲ್ಲಿ ಏರ್ಪಡಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 7019791311, 7019161612.

## ಕರ್ನಾಟಕದಲ್ಲಿ ಭ್ರಷ್ಟ ಮುಕ್ತ ಸರ್ಕಾರ ಕೊಡಿ : ಪ್ರಧಾನಿಗೆ ಪೈ ಒತ್ತಾಯ

ಬೆಂಗಳೂರು, ಸೆ. 2 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕದಲ್ಲಿ ಭ್ರಷ್ಟಾಚಾರ ಮುಕ್ತ ಸರ್ಕಾರ ಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ಐ.ಟಿ. ವಲಯದ ಹಿರಿಯರಾದ ಟಿವಿ. ಮೋಹನ್‌ದಾಸ್ ಪೈ ಒತ್ತಾಯಿಸಿದ್ದಾರೆ. ಪ್ರಧಾನಿ ಮೋದಿ ಅವರು 3,800 ಕೋಟಿ ರೂ.ಗಳ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಲು ಮಂಗಳೂರಿಗೆ ಆಗಮಿಸುತ್ತಿರುವ ಸಂದರ್ಭದಲ್ಲಿ ಪೈ ಈ ಒತ್ತಾಯ ಮಾಡಿದ್ದಾರೆ. ದೆಹಲಿಯಲ್ಲಿರುವ ಅಭಿವೃದ್ಧಿ ಗುರಿ ಹೊಂದಿದ ಭ್ರಷ್ಟಾಚಾರ ರಹಿತ ಸರ್ಕಾರವೇ ಕರ್ನಾಟಕಕ್ಕೂ ಬೇಕಿದೆ ಎಂದವರು ಹೇಳಿದ್ದಾರೆ.

ಭ್ರಷ್ಟ ಅಧಿಕಾರಿಗಳನ್ನು ವಜಾಗೊಳಿಸಬೇಕಿದೆ, ಭ್ರಷ್ಟ ರಾಜಕಾರಣಿಗಳನ್ನು ಬದಿಗೊತ್ತಬೇಕಿದೆ. ಭವಿಷ್ಯದಲ್ಲಿ ಎಲ್ಲ ಯೋಜನೆಗಳಿಗೆ ವೇಗ ಹಾಗೂ ಉತ್ತಮ ಆಡಳಿತ ಬೇಕಿದೆ ಎಂದವರು ಹೇಳಿಕೆ ನೀಡಿದ್ದಾರೆ.

## ಹಾಲಿವಾಣ ಗ್ರಾ.ಪಂ ಅಧ್ಯಕ್ಷರಾಗಿ ಮಡಿವಾಳರ ಬಸವರಾಜ್



ಮಲೇಬೆನ್ನೂರು ಸೆ 2 - ಹಾಲಿವಾಣ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಗುಂಪಿನ ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್ ಅವರು ಕೊನೆ ಗಳಿಗೆಯಲ್ಲಿ ಬಿಜೆಪಿ ಗುಂಪಿನ ಬೆಂಬಲದೊಂದಿಗೆ ಆಯ್ಕೆಯಾಗುವ ಮೂಲಕ ಕಾಂಗ್ರೆಸ್ ಪಕ್ಷದವರಿಗೆ ಶಾಕ್ ನೀಡಿದ್ದಾರೆ.

ಕೊಮಾರನಹಳ್ಳಿಯ ಐ.ಪಿ ರಂಗನಾಥ್ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಮಡಿವಾಳರ ಬಸವರಾಜ್ 9 ಮತಗಳನ್ನು ಪಡೆದು ಆಯ್ಕೆಯಾದರೆ ಹಾಲಿವಾಣದ ಚಿಕ್ಕಪ್ಪ ಅವರು 6 ಮತಗಳನ್ನು ಪಡೆದು ಪರಾಭವಗೊಂಡರು.

ಹರಿಹರ ತಾ.ಪಂ. ಇ.ಓ. ಗಂಗಾಧರ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಚುನಾವಣೆ ನಂತರ ನೂತನ ಅಧ್ಯಕ್ಷರನ್ನು ಬಿಜೆಪಿಯ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಮುಖಂಡ ಜಿ.ಕೆ. ಮಲ್ಲೇಶಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಐ.ಪಿ ರಂಗನಾಥ್, ಉಪಾಧ್ಯಕ್ಷೆ ಅಂಜಿತಾ ಸಂತೋಷ್, ಸದಸ್ಯರಾದ ನೇತ್ರಾವತಿ ಕೋಂ ಹನುಮಂತು, ಗೌಡ್ರ ಹನುಮಂತಪ್ಪ, ಪಿ.ಕೆ ಮೋಹನ್, ಗೋಲಿ ಮಹೇಶ್, ಜಿ.ಕೆ ಸುರೇಶ್, ದಿಬ್ಬದ ಹಳ್ಳಿಯ ಓಂಕಾರಪ್ಪ ಮತ್ತು ಕೊಮಾರನಹಳ್ಳಿಯ ಐರಣಿ ಮಹೇಶ್ವರಪ್ಪ, ಜಿ.ಸುನಿಲ್, ಕೆ.ಎಲ್ ಹರೀಶ್ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.

## ಹೊನ್ನಾಳಿ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಗಜೇಂದ್ರಪ್ಪ

ಹೊನ್ನಾಳಿ, ಸೆ. 2 - ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ ಮಾಸಡಿ ಗ್ರಾಮದ ಎಂ.ಎಚ್. ಗಜೇಂದ್ರಪ್ಪ ಅವಿರೋಧವಾಗಿ ಆಯ್ಕೆಯಾದರು.

ಡಿ.ಬಿ. ಯೋಗೇಶ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಿತು. ಮಾಜಿ ಶಾಸಕ ಹಾಗೂ ಸಂಘದ ನಿರ್ದೇಶಕರೂ ಆದ ಡಿ.ಜಿ. ಶಾಂತನಗೌಡ್ರು, ಉಪಾಧ್ಯಕ್ಷರಾದ ಕೆ. ವಿಶಾಲಾಕ್ಷಿ, ನಿರ್ದೇಶಕರಾದ ಕೆ.ಇ. ಈಶ್ವರಪ್ಪ, ಎಂ.ಸಿ. ಸುರೇಶ್, ಎ.ಜಿ. ಗಣೇಶ್, ಟಿ. ಮಲ್ಲೇಶಪ್ಪ, ಬಿ.ಎ. ಅನಿಲ್, ಡಿ. ಮಂಜುನಾಥ್, ಎಚ್.ಸಿ. ಶೇಖರಪ್ಪ, ಎಚ್. ಬಸವರಾಜಪ್ಪ, ಎಸ್. ಬಸವರಾಜಪ್ಪ, ನಾಗಮ್ಮ ಹಾಗೂ ಸಂಘದ ಕಾರ್ಯ ನಿರ್ವಾಹಕ ಅಧಿಕಾರಿ ಮುರುಗೇಶಪ್ಪ, ಸಿಬ್ಬಂದಿ ಗೋಪಿನಾಥ್, ಸುರೇಶ್, ಸುಧಾ ಉಪಸ್ಥಿತರಿದ್ದರು.



## ನಗರಕ್ಕೆ ಇಂದು ನಟ ಡಾಲಿ ಧನಂಜಯ



ಸಿದ್ದವೀರಪ್ಪ ಬಡಾವಣೆಯ 12ನೇ ಅಡ್ಡ ರಸ್ತೆಯಲ್ಲಿ ಟೀಂ 42 ವತಿಯಿಂದ ಆಯೋಜಿಸಿರುವ ಪ್ರಥಮ ವರ್ಷದ ಗಣೇಶೋತ್ಸವ ಕಾರ್ಯಕ್ರಮಕ್ಕೆ ಇಂದು ಸಂಜೆ 7 ಗಂಟೆಗೆ ಚಿತ್ರ ನಟ ಡಾಲಿ ಧನಂಜಯ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಅಧ್ಯಕ್ಷ ಎಂ.ಕೆ. ಮಂಜುನಾಥ್ ತಿಳಿಸಿದ್ದಾರೆ.

## ಮಾಂಗಲ್ಯ ಸರ ಅಪಹರಿಸಿದ್ದ ಇಬ್ಬರ ಬಂಧನ

ದಾವಣಗೆರೆ, ಸೆ.2- ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದ ದಂಪತಿ ಹಿಂಬಾಲಿಸಿ, ಮಹಿಳೆಯೋರ್ವರ ಬಂಗಾರದ ಮಾಂಗಲ್ಯ ಸರವನ್ನು ಅಪಹರಿಸಿದ್ದ ಸರಗಳ್ಳರಿಬ್ಬರನ್ನು ಬಂಧಿಸಿರುವ ಪೊಲೀಸರು ಸರವನ್ನು ವಶಪಡಿಸಿಕೊಂಡಿದ್ದಾರೆ.



ಚಿತ್ರದುರ್ಗ ಜಿಲ್ಲೆಯ ಮಂಜುನಾಥ, ಮನೋಜ್ ಎಂಬುವವರನ್ನು ಗುರುವಾರ ಬಂಧಿಸಿ, 50 ಗ್ರಾಂ ಬಂಗಾರ ಅಭರಣವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ಎ1 ಆರೋಪಿತನನ್ನು ದಸ್ತಗಿರಿ ಮಾಡಬೇಕಾಗಿದ್ದು, ತನಿಖೆ ಮುಂದುವರೆದಿದೆ.

ಮೇ 25, 2022 ರಂದು ಸಂಜೆ ಕೂಡ್ಲಿಗಿ ತಾಲ್ಲೂಕು ಕಾನಾಮಡುಗು ಗ್ರಾಮದ ಬಿ.ಎಸ್. ಸುಷ್ಮಾ ಮತ್ತು ಜಿ. ರಮೇಶ್ ದಂಪತಿ ದ್ವಿಚಕ್ರ ವಾಹನದಲ್ಲಿ ಜಗಳೂರು-ದಾವಣಗೆರೆ ರಸ್ತೆಯಲ್ಲಿ ಬಿಳಿಚೋಡು ಕಡೆಗೆ ಹೋಗುತ್ತಿದ್ದರು. ಈ ವೇಳೆ ಬೈಕಿನಲ್ಲಿ ಹಿಂಬಲಿಸಿಕೊಂಡು ಬಂದ ಇಬ್ಬರು ಸರಗಳ್ಳರು ಏಕಾಏಕಿ ಸುಷ್ಮಾ ಅವರ ಕೊರಳಿನಲ್ಲಿದ್ದ ಎರಡು ಲಕ್ಷ ರೂ. ಮೌಲ್ಯದ 46 ಗ್ರಾಂ ತೂಕದ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು.

ಈ ಸಂಬಂಧ ಬಿಳಿಚೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದಾವಣಗೆರೆ ಗ್ರಾಮಾಂತರ ಉಪವಿಭಾಗದ ಸಹಾಯಕ ಪೊಲೀಸ್ ಅಧೀಕ್ಷಕ ಕನ್ನಿಕಾ ಸಿಕ್ರಿವಾಲ್ ಮಾರ್ಗದರ್ಶನದಲ್ಲಿ ಬಿಳಿಚೋಡು ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಕೆ. ಸತ್ಯನಾರಾಯಣಸ್ವಾಮಿ, ಪಿಎಸ್‌ಐ ಕೆ. ಓಂಕಾರಿ ನಾಯ್ಕ್ ಹಾಗೂ ಸಿಬ್ಬಂದಿಗಳಾದ ಕರಿಬಸಪ್ಪ, ಯಾಸಿನ್ ಉಲ್ಲಾ, ಸಿದ್ದಪ್ಪ, ಜಬೀ, ತಿಮ್ಮೇಶಿ, ನಾಗರಾಜಯ್ಯ, ನಾಗೇಶ್ ನಾಯ್ಕ, ಹನುಮಂತಪ್ಪ ಕವಾಡಿ, ಗಣೇಶಪ್ಪ ಗುಬ್ಬಿ, ಜಿ.ಎಸ್. ಕರಿಬಸವರಾಜ ಒಳಗೊಂಡ ತಂಡ ಈ ಪ್ರಕರಣವನ್ನು ಪತ್ತೆ ಹಚ್ಚಿದೆ.

## ಎಳೆಹೊಳೆ ಗ್ರಾಮದ ಹೆಚ್.ಎಂ. ತಿಪ್ಪೇಸ್ವಾಮಿ ನಿಧನ



ದಾವಣಗೆರೆ ವಿದ್ಯಾನಗರ 4ನೇ ಮೇನ್ 9ನೇ ಕ್ರಾಸ್, ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದ ಪಕ್ಕದ ರಸ್ತೆ ವಾಸಿ ನಿವೃತ್ತ ಮುಖ್ಯೋಪಾಧ್ಯಾಯರಾದ ಎಳೆಹೊಳೆ ಹೆಚ್.ಎಂ. ತಿಪ್ಪೇಸ್ವಾಮಿ (73) ಅವರು ದಿನಾಂಕ 2.9.2022ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.9.2022ರ ಶನಿವಾರ ಬೆಳಿಗ್ಗೆ 10.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಜಗಳೂರಿನಲ್ಲಿ ಅಪರಿಚಿತನ ಶವ ಪತ್ತೆ



ದಾವಣಗೆರೆ, ಸೆ.2- ನಗರದ ಕೆ.ಆರ್. ರಸ್ತೆಯ ಜಗಳೂರು ಬಸ್ ನಿಲ್ದಾಣದಲ್ಲಿ ನಿನ್ನೆ ರಾತ್ರಿ 2 ಗಂಟೆಗೆ ಸುಮಾರು 50 ವರ್ಷದ ಅಪರಿಚಿತ ಪುರುಷನ ಮೃತ ದೇಹ ದೊರೆತಿದೆ. ಶವವನ್ನು ಸಿ.ಜಿ. ಜಿಲ್ಲಾಸ್ಪತ್ರೆಯಲ್ಲಿ ಇರಿಸಲಾಗಿದೆ. ಮೃತನು ಹಳದಿ ಬಣ್ಣದ ಶರ್ಟ್ ಧರಿಸಿರುತ್ತಾನೆ. ಮೃತನ ಸಂಬಂಧಿಕರು ಅಥವಾ ಪರಿಚಯದವರು ಬಸವನಗರ ಪೊಲೀಸ್ ಠಾಣೆ (94808 03240, 08192-272009) ಯನ್ನು ಸಂಪರ್ಕಿಸಬಹುದು.

# ದೇವರಬೆಳಕೆರೆ ಪಿಕಪ್ ಡ್ಯಾಂ : ಸಸ್ಯ ರಾಶಿ ತೆರವಿಗೆ ಚಾಲನೆ

ಮಲೇಬೆನ್ನೂರು, ಸೆ. 2 - ದೇವರಬೆಳಕೆರೆ ಪಿಕಪ್ ಡ್ಯಾಂ ನ ಗೇಟಗಳ ಬಳಿ ಸ್ಟಾಕ್ ಆಗಿದ್ದ ಸಸ್ಯ ರಾಶಿಯನ್ನು ಜೆಸಿಬಿ ಮೂಲಕ ತೆರವು ಮಾಡುವ ಕಾಮಗಾರಿಗೆ ಶುಕ್ರವಾರ ಚಾಲನೆ ನೀಡಲಾಯಿತು.

ಅವೈಜ್ಞಾನಿಕ ಗೇಟ್ ಅಳವಡಿಕೆಯಿಂದಾಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರು ಸರಾಗವಾಗಿ ಹೊರ ಹೋಗದ ಕಾರಣ ಹಿನ್ನೀರಿನಲ್ಲಿ ನೂರಾರು ಎಕರೆ ಭತ್ತದ ಬೆಳೆ ಮತ್ತು ತೋಟಗಳು ಮುಳುಗಡೆಯಾಗಿ ಅಪಾರ ನಷ್ಟ ಸಂಭವಿಸುತ್ತಿದೆ ಎಂದು ಗುರುವಾರ ಗುಳದಹಳ್ಳಿ ಮತ್ತು ಸಂಕ್ಲಿಪುರ ರೈತರು ಆಕ್ರೋಶ ವ್ಯಕ್ತ ಪಡಿಸಿದ್ದರು. ಇದರಿಂದ ಎಚ್ಚೆತ್ತುಕೊಂಡ ನೀರಾವರಿ ಇಲಾಖೆಯ ಎಇಇ ಧನುಂಜಯ ಅವರು ಜೆಸಿಬಿ ತರಿಸಿ ಸಸ್ಯ ರಾಶಿ ತೆರವಿಗೆ ಮುಂದಾಗಿದ್ದಾರೆ.

ಈಗಿರುವ ಸ್ವಯಂ ಚಾಲಿತ ಗೇಟ್‌ಗಳು ಸರಿಯಾಗಿ ಕೆಲಸ ಮಾಡದ ಕಾರಣ ಸಸ್ಯ ರಾಶಿ ಹೊರ ಹೋಗುತ್ತಿಲ್ಲ, ಇದರಿಂದಾಗಿ ಹಿನ್ನೀರು ಹೆಚ್ಚಾಗಿ ಗುಳದಹಳ್ಳಿ, ಸಂಕ್ಲೀಪುರ ಮತ್ತಿತರ ಹಳ್ಳಿಗಳ ರೈತರಿಗೆ ತೊಂದರೆ ಆಗಿದೆ, ಮಾನವ ಚಾಲಿತ ಗೇಟ್ ಅಳವಡಿಕೆಗೆ 40 ಲಕ್ಷ ರೂ ಅನುದಾನ ಬಂದಿದ್ದು, ಶೀಘ್ರ ಟೆಂಡರ್ ಕರೆದು ಕಾಮಗಾರಿ ಆರಂಭಿಸುವುದಾಗಿ ಎಇಇ ಧನುಂಜಯ ಅವರು ರೈತರಿಗೆ ಸಮಾಧಾನ ಮಾಡಿದರು.



**ಡಿಸಿ ಭೇಟಿ :** ಸ್ಥಳಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಪಾಶಿ ಅವರು ಭೇಟಿ ನೀಡಿ ಸಸ್ಯ ರಾಶಿ ತೆರವು ಕಾಮಗಾರಿ ವೀಕ್ಷಿಸಿದರು, ಈ ವೇಳೆ ದೇವರಬೆಳಕೆರೆ, ಮುದಹದಡಿ, ಬಲ್ಲೂರು, ಶಿರನಹಳ್ಳಿ, ವಡೇರಹಳ್ಳಿ, ಗುಳದಹಳ್ಳಿ, ಸಂಕ್ಲೀಪುರ, ಬೂದಿಹಾಳು, ಜಡಗನಹಳ್ಳಿ, ಬಟ್ಲಕಟ್ಟೆ, ಕನಗನಹಳ್ಳಿ ಗ್ರಾಮಗಳ ರೈತರು ಜಲಾಶಯದ ಹಿನ್ನೀರಿನಿಂದ ನಮ್ಮ ಸಾವಿರಾರು ಎಕರೆ ಭತ್ತದ ಗದ್ದೆಗಳು, ತೋಟ ನೀರಿನಲ್ಲಿ ಮುಳುಗಡೆಯಾಗಿ ಅಪಾರ ನಿಷ್ಟವಾಗುತ್ತಿದೆ ಎಂದು ಬೇಸರ ವ್ಯಕ್ತ ಪಡಿಸಿದರು, ಜಿಲ್ಲಾಧಿಕಾರಿ ಶೀಘ್ರ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಸಿಪಿಐ ಸತೀಶ್ ಕುಮಾರ್, ರೈತ ಸಂಕ್ಲಿಪುರದ ನಿಂಗಪ್ಪ ಮತ್ತು ಚಂದ್ರಶೇಖರಯ್ಯ, ಎಇ ಭರತ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 03, 2022





## ಮುರುಘಾ ಶ್ರೀಗಳ ಪ್ರಕರಣ ಸಿಬಿಐಗೆ ವಹಿಸಿ

### ಪ್ರಗತಿಪರ ಸಂಘಟನೆಗಳ ಒಕ್ಕೂಟ ಆಗ್ರಹ, ಶೋಷಿತ ಮಕ್ಕಳಿಗೆ ನ್ಯಾಯ ಒದಗಿಸಲು ಒತ್ತಾಯ

ದಾವಣಗೆರೆ, ಸೆ. 2- ಪೋಕ್ಸೋ ಮತ್ತು ಅಸ್ಪೃಶ್ಯತಾ ನಿಷೇಧ ಕಾಯ್ದೆಯಡಿ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಪ್ರಗತಿಪರ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ವಿವಿಧ ಸಂಘಟನೆಗಳ ವತಿಯಿಂದ ಪ್ರತಿಭಟನೆ ನಡೆಸಿ, ಮುರುಘಾ ಶರಣರಿಗೆ ಬೆಂಬಲ ನೀಡುತ್ತಿರುವ ಸರ್ಕಾರ ಹಾಗೂ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ಬಿ. ರಾಮಚಂದ್ರಪ್ಪ, ಈ ನೆಲದಲ್ಲಿ ಜನ ಸಾಮಾನ್ಯರಿಗೊಂದು, ಉಳ್ಳವರಿಗೊಂದು ಕಾನೂನು ಇದೆಯೇ? ಎಂದು ಪ್ರಶ್ನಿಸಿ, ಅಸಮಾಧಾನ ಹೊರ ಹಾಕಿದರು.

ಗೃಹ ಸಚಿವರು, ಮಾಜಿ ಮುಖ್ಯಮಂತ್ರಿಗಳೂ ಸಹ ಮುರುಘಾ ಶರಣರು ತಪ್ಪು ಮಾಡಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಿರುವುದು ವಿಷಾದನೀಯ. ಪ್ರಕರಣ ದಾಖಲಾಗಿದ್ದರೂ ಅವರನ್ನು ಬಂಧಿಸದೇ ಇರುವುದು ಕಾನೂನು ಬಾಹಿರ ಎಂದು ಹೇಳಿದರು.

ಹೆಚ್ಚಿನವರು ಸ್ವಾಮೀಜಿ ಅವರ ಪರವೇ ಮಾತನಾಡುತ್ತಿದ್ದಾರೆಯೇ ಹೊರತು, ದೌರ್ಜನ್ಯಕ್ಕೊಳಗಾದ ಬಾಲಕಿಯರ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಮಾನವೀಯತೆ ಇರುವವರು ಶೋಷಿತರ ಪರ ಮಾತನಾಡಬೇಕು. ಶರಣರು ಎಷ್ಟೇ ದೊಡ್ಡವರಾಗಿದ್ದರೂ ಕಾನೂನಿಗೆ ತಲೆಬಾಗಬೇಕಾಗಿತ್ತು ಎಂದರು.

ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಶೋಷಿತ ಮಕ್ಕಳಿಗೆ ಶಿಕ್ಷಣ ನೀಡಿ, ಉದ್ಯೋಗ ಕೊಡಿಸುವ ಜವಾಬ್ದಾರಿ ಸರ್ಕಾರ ಹೊರಬೇಕು. ಜೊತೆಗೆ ಮಕ್ಕಳಿಗೆ ತಲಾ 1 ಕೋಟಿ ರೂ. ಪರಿಹಾರ ವಿತರಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ವಕೀಲ ಗುಮ್ಮನೂರು ಮಲ್ಲಿಕಾರ್ಜುನ ಮಾತನಾಡಿ, ಶರಣರ ವಿರುದ್ಧ ಪಾರದರ್ಶಕ ತನಿಖೆಯಾಗಬೇಕು. ಶ್ರೀಗಳನ್ನು ಬೆಂಬಲಿಸುವ ರಾಜಕಾರಣಿಗಳನ್ನೂ ಆಪಾದಿತರನ್ನಾಗಿ ಮಾಡಬೇಕು. ಪ್ರಕರಣದ ನಿರ್ಲಕ್ಷ್ಯ ವಹಿಸಿದ (4ನೇ ಪುಟಕ್ಕೆ)

### ಪರ-ವಿರೋಧದ ಪ್ರತಿಭಟನೆಗೆ ಸಾಕ್ಷಿಯಾದ ಜಯದೇವ ವೃತ್ತ

**ಚಿತ್ರದುರ್ಗ ಮುರುಘಾಶರಣರ ಬಂಧನ ಖಂಡಿಸಿ ಹಾಗೂ ಶರಣರ ಪ್ರಕರಣ ಸಿಬಿಐ ತನಿಖೆಗೆ ಒತ್ತಾಯಿಸಿ ನಡೆದ ಎರಡೂ ಪ್ರತಿಭಟನೆಗಳಿಗೆ ಜಯದೇವ ವೃತ್ತ ಸಾಕ್ಷಿಯಾಯಿತು.**

**ಅಂಬೇಡ್ಕರ್ ವೃತ್ತದಲ್ಲಿ ಸಿಬಿಐ ತನಿಖೆಗೆ ಒತ್ತಾಯಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಪ್ರತಿಭಟನೆ ನಡೆಸಿ, ಜಯದೇವ ವತ್ತಕ್ಕೆ ಆಗಮಿಸಿತು. ಇತ್ತ ಮುರುಘಾ ಶ್ರೀಗಳನ್ನು ಬೆಂಬಲಿಸಿ, ಬಂಧನ ಖಂಡಿಸಿ ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಮಠದ ಅಭಿಮಾನಿಗಳಿಂದಲೂ ಪ್ರತಿಭಟನೆಗೆ ತಯಾರಿ ನಡೆಯುತ್ತಿತ್ತು.**

**ಪ್ರಗತಿಪರ ಸಂಘಟನೆಗಳ ಒಕ್ಕೂಟದವರು ಶರಣರ ವಿರುದ್ಧ ಘೋಷಣೆ ಕೂಗಿದರು. ಜಯದೇವ ವೃತ್ತದಲ್ಲಿಯೇ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಲು ಮುಂದಾದರು. ಆಗ ಪೊಲೀಸರು ತಡೆದಾಗ, ಮಾತಿನ ಚಕಮಕಿಯಾಯಿತು. ಕೊನೆಗೂ ಒಕ್ಕೂಟದವರನ್ನು ಮನವೊಲಿಸಿ ಮುಂದೆ ಕಳುಹಿಸುವಲ್ಲಿ ಪೊಲೀಸರು ಸಫಲರಾದರು. ಇತ್ತ ಶ್ರೀಗಳ ಅಭಿಮಾನಿಗಳ ಪ್ರತಿಭಟನೆ ಆರಂಭವಾಯಿತು.**



## ಮುರುಘಾಶ್ರೀ ಬಂಧನ ಖಂಡಿಸಿ ಪ್ರತಿಭಟನೆ

### ಗುರುಗಳು ಹಾಲಿನಷ್ಟೇ ಪರಿಶುದ್ಧರು, ಶೀಘ್ರ ಆರೋಪ ಮುಕ್ತರಾಗಲಿದ್ದಾರೆ: ಬಸವಪ್ರಭು ಶ್ರೀ

ದಾವಣಗೆರೆ, ಸೆ. 2- ಚಿತ್ರದುರ್ಗ ಮುರುಘಾ ಮಠದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರ ಬಂಧನ ಖಂಡಿಸಿ ನಗರದ ಜಗದ್ಗುರು ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಶುಕ್ರವಾರ ಬಸವ ಕೇಂದ್ರ ಹಾಗೂ ಸರ್ವ ಸಮಾಜದ ಮುರುಘಾ ಮಠದ ಅಭಿಮಾನಿಗಳಿಂದ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಮುರುಘಾ ಶರಣರ ಬಂಧನದ ದಿನ ಇತಿಹಾಸದಲ್ಲಿಯೇ ದುಃಖದ ದಿನ ಎಂದು ಹೇಳಿದರು.

ಯಾರು ಸಮಾನತೆ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸಿದರೋ ಅವರೇ ಇಂದು ಷಡ್ಯಂತ್ರಕ್ಕೆ ಗುರಿಯಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

12ನೇ ಶತಮಾನದಲ್ಲಿ ಬಸವಣ್ಣನವರನ್ನೂ ಗಡಿಪಾರು ಮಾಡಿದ್ದರು. ಮಹಾತ್ಮ ಗಾಂಧೀಜಿ ಅವರೂ ಗುಂಡೇಟಿಗೆ ಬಲಿಯಾದರು. ಹಾಗೆಯೇ 21ನೇ ಶತಮಾನದ ದಾರ್ಶನಿಕರಾದ ಶರಣರಿಗೆ ಇಂದು ಇಂತಹ ಕಳಂಕ ತಂದಿಟ್ಟಿದ್ದಾರೆ.

ಶ್ರೀಗಳು ಅಮೆರಿಕಾ ಪ್ರವಾಸದಲ್ಲಿದ್ದಾಗ, ಶ್ರೀಮಠದಲ್ಲಿ ಅವರಿಲ್ಲದ ವೇಳೆ ಷಡ್ಯಂತ್ರ ರೂಪಿಸಲಾಗಿದೆ. ಮಠದ ಉತ್ತರಾಧಿಕಾರಿಗಳ ಮೇಲೂ ಆರೋಪ ಹೊರಿಸಲಾಗಿದೆ. ಶ್ರೀಗಳಿಗೆ ಆಗದವರು, ವಿರೋಧಿಗಳು ಮಾಡಿರುವ ಕುತಂತ್ರ ಮೇಲ್ನೋಡಕ್ಕೆ ಸಾಬೀತಾಗಿದೆ ಎಂದರು.

ಶರಣರು ಹಾಲಿನಷ್ಟೇ ಪರಿಶುದ್ಧರು. ಅವರು ಬಂಗಾರದ ಮನುಷ್ಯರು. ಬಂಗಾರ ಎಂದು ಗೊತ್ತಿದ್ದರೂ ಅದನ್ನು ಅರೆದು ಪರೀಕ್ಷೆ ಮಾಡುತ್ತಾರೆ. ಹಾಗೆಯೇ ಅಪ್ಪಟ ಬಂಗಾರದ ಗುಣ ಹೊಂದಿರುವ ಗುರುಗಳು ಆರೋಪ ಮುಕ್ತರಾಗಿ ಹೊರಬರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭೋವಿ ಸಮಾಜದ ಮುಖಂಡ ಡಿ. ಬಸವರಾಜ್ ಮಾತನಾಡಿ, ಎಲ್ಲಾ ಸಮುದಾಯಕ್ಕೂ ಸ್ವಾಭಿಮಾನದ ಬದುಕು ಕಟ್ಟಿಕೊಟ್ಟವರು ಮುರುಘಾ ಶರಣರು. ಅವರ ಮೇಲೆ ಇಂತಹ ಕಳಂಕ ತರಲಾಗಿದೆ. ಶ್ರೀಗಳ ಬಂಧನವಾಗಿಲ್ಲ. ತನಿಖೆಗೆ ಸಹಕರಿಸುವ ನಿಟ್ಟಿನಲ್ಲಿ (5ನೇ ಪುಟಕ್ಕೆ)

## ಸೆ.5ರ ವರೆಗೆ ಶರಣರು ಪೊಲೀಸ್ ವಶಕ್ಕೆ

ಚಿತ್ರದುರ್ಗ, ಸೆ. 2 - ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಮೇಲೆ ಬಂಧನಕ್ಕೊಳಗಾಗಿರುವ ಚಿತ್ರದುರ್ಗದ ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರನ್ನು ಹೆಚ್ಚಿನ ವಿಚಾರಣೆಗಾಗಿ ಸೆಪ್ಟೆಂಬರ್ 5ರ ವರೆಗೆ ಪೊಲೀಸರ ವಶಕ್ಕೆ ನೀಡಿ ಕೋರ್ಟ್ ಆದೇಶಿಸಿದೆ.

ಶ್ರೀಗಳ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾದ ಆರು ದಿನಗಳ ನಂತರ ನಿನ್ನೆ ರಾತ್ರಿ 10 ಗಂಟೆಯ ಸುಮಾರಿಗೆ ಚಿತ್ರದುರ್ಗ ಪೊಲೀಸರು ಅವರನ್ನು ಬಂಧಿಸಿದ್ದರು. ಇಂದು ಆರೋಪಿ ಶ್ರೀಗಳನ್ನು ಎರಡನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ ಮುಂದೆ ಹಾಜರುಪಡಿಸಲಾಯಿತು.



ಈ ವೇಳೆ ಆರೋಪಿ ಶ್ರೀಗಳನ್ನು ವಿಚಾರಣೆಗಾಗಿ ಐದು ದಿನ ತಮ್ಮ ವಶಕ್ಕೆ ನೀಡಬೇಕು ಎಂದು ಪೊಲೀಸರು ಮನವಿ ಮಾಡಿದರು. ಆದರೆ ಕೋರ್ಟ್ ಮೂರು ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡಿ ಆದೇಶಿಸಿದೆ.

ಬಂಧನದ ನಂತರ ಶರಣರು ಅಸ್ವಸ್ಥರಾಗಿದ್ದರು. ಈ ಹಿನ್ನೆಲೆಯಲ್ಲಿ ಶುಕ್ರವಾರ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಜಿಲ್ಲಾಸ್ಪತ್ರೆಯಲ್ಲಿ ಸತತ 2 ಗಂಟೆಗಳ ಕಾಲ ಶ್ರೀಗಳ ತಪಾಸಣೆ ನಡೆಸಿದ ಮೂವರು ವೈದ್ಯರ ತಂಡ ಚೆಸ್ಟ್ ಸ್ಕ್ಯಾನ್, ಇಸಿಜಿ, ಎಕೊ, ಎಂ.ಆರ್.ಐ. ಸ್ಕ್ಯಾನ್ ಹೀಗೆ ಹಲವು ಪರೀಕ್ಷೆಗಳನ್ನು ನಡೆಸಿದರು. ಶ್ರೀಗಳು ಎದೆನೋವು ಹಾಗೂ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಆರೋಪಿಯನ್ನು ನ್ಯಾಯಾಲಯದ ಎದುರು ಹಾಜರುಪಡಿಸುವಂತೆ 2ನೇ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಮೂರ್ತಿ ಕೋಮಲ ಅವರು ಆದೇಶಿಸಿದ್ದರು. ಅದರಂತೆ ಆರೋಪಿ ಶರಣರನ್ನು ಆಸ್ಪತ್ರೆಯಿಂದ ನ್ಯಾಯಾಲಯದ ಎದುರು ಹಾಜರು ಪಡಿಸಲಾಗಿತ್ತು.


**ಶರಣರ ವಿರುದ್ಧ ವಾರಂಟ್ :** ಈ ನಡುವೆ, ಶ್ರೀ ಮುರುಘಾ ಶರಣರಿಗೆ ಮತ್ತೊಂದು ಸಮಸ್ಯೆ ಎದುರಾಗಿದ್ದು, ಮಠದ ಆಸ್ತಿ (5ನೇ ಪುಟಕ್ಕೆ)

## ಪ್ರಧಾನಿಯಿಂದ ಚುನಾವಣಾ ಸಿದ್ಧತೆ ಪರಿಶೀಲನೆ

### ಅಪಸ್ವರ ಬರದಂತೆ ಜನರಿಗೆ ಸ್ಪಂದಿಸಿ: ಬೊಮ್ಮಾಯಿ ಸರ್ಕಾರಕ್ಕೆ ಮೋದಿ ಸೂಚನೆ

ಬೆಂಗಳೂರು, ಸೆ. 2 - ರಾಜ್ಯದ ಪ್ರತಿ ಬೂತಿಗೆ ಕನಿಷ್ಠ 20 ಬಿಜೆಪಿ ಕಾರ್ಯಕರ್ತರನ್ನು ಗುರುತಿಸುವ ಕಾರ್ಯ ಸೇರಿದಂತೆ ಮುಂಬರುವ ವಿಧಾನಸಭಾ ಚುನಾವಣೆಗೆ ರಾಜ್ಯ ಬಿಜೆಪಿ ಕೈಗೊಂಡಿರುವ ಸಿದ್ಧತೆಯ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿವರ ಪಡೆದಿದ್ದಾರೆ.

ಒಂದು ದಿನದ ರಾಜ್ಯ ಪ್ರವಾಸಕ್ಕೆ ಮಂಗಳೂರಿಗೆ ಆಗಮಿಸಿದ್ದ ಪ್ರಧಾನಿಯವರು ಸರ್ಕಾರಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ನಂತರ ರಾಜ್ಯ ಬಿಜೆಪಿಯ ಕೋರ್ ಕಮಿಟಿ ಸದಸ್ಯರೊಟ್ಟಿಗೆ ಚುನಾವಣಾ ಸಿದ್ಧತೆಯ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ, ಸಲಹೆ ಸೂಚನೆಗಳನ್ನು ನೀಡಿದ್ದಾರೆ.



ಪ್ರಧಾನಿ ಅವರು ಮಾತಾಡುವ ಮುನ್ನ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು, ಮುಂಬರುವ ಚುನಾವಣೆ ಸಿದ್ಧತೆ ಕುರಿತಂತೆ 8 ನಿಮಿಷದ ಪ್ರಾತ್ಯಕ್ಷತೆಯನ್ನು ತೋರಿಸಿ ರಾಜ್ಯದ 120 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಭರವಸೆ ನೀಡಿದ್ದಾರೆ. ಅಲ್ಲದೆ, ಚುನಾವಣೆ ವೇಳೆಗೆ 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಗುರಿ ಹಾಕಿಕೊಳ್ಳುವುದಾಗಿ ಹೇಳಿದ್ದಾರೆ.

ರಾಜ್ಯ ಸರ್ಕಾರದಿಂದ ಚುನಾವಣೆ ಸಿದ್ಧತೆ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 5 ನಿಮಿಷದ ಪ್ರಾತ್ಯಕ್ಷತೆ ಮೂಲಕ ಮಾಹಿತಿ ನೀಡಿದ್ದಾರೆ. ಸರ್ಕಾರದ ಮಹತ್ವದ ವಿದ್ಯಾನಿಧಿ ಯೋಜನೆಯ ಮೂಲಕ ಯುವ ಸಮುದಾಯ ಆಕರ್ಷಿಸಲಾಗುವುದು. ಇದರಿಂದ ಸರ್ಕಾರಕ್ಕೆ ಒಳ್ಳೆ ಹೆಸರು ಬರಲಿದೆ ಎಂದಿದ್ದಾರೆ.

ಚುನಾವಣೆಗೆ ಮುನ್ನ ನೀವು ಹಾಗೂ ಕೇಂದ್ರ ಗೃಹ ಸಚಿವರು ರಾಜ್ಯಕ್ಕೆ ಹೆಚ್ಚು ಸಮಯ ಕೊಡಬೇಕು ಎಂದು ಕೋರಿದ್ದಾರೆ.

ಬಳಿಕ ಮಾತನಾಡಿದ ಪ್ರಧಾನಿ, ಚುನಾವಣೆಯ ಜೊತೆಗೆ ರಾಜ್ಯ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದಿಯೇ? ಸ್ಪಂದಿಸಿದ್ದರೆ, ಅಪಸ್ವರಗಳು ಏತಕ್ಕೆ ಕೇಳಿ ಬಂದಿವೆ? ಎಂದಿದ್ದಾರೆ.

ರಾಜಕೀಯ ವ್ಯಕ್ತಿಗಳು ಮಾಡುವ ಆರೋಪಗಳನ್ನು ರಾಜಕೀಯವಾಗಿ ಎದುರಿಸಿ, ಆದರೆ ಸಾರ್ವಜನಿಕರು, ಉದ್ಯಮಿದಾರರು ಎತ್ತುವ (4ನೇ ಪುಟಕ್ಕೆ)

## ಶರಣರ ಪ್ರಕರಣ; ಪೊಲೀಸರಿಗೆ ಮುಕ್ತ ಸ್ವಾತಂತ್ರ್ಯ: ಬೊಮ್ಮಾಯಿ

ಮಂಗಳೂರು, ಸೆ. 2 – ಬಂಧಿತ ಶ್ರೀ ಶಿವಮೂರ್ತಿ ಮುರುಘಾ ಶರಣರ ಪ್ರಕರಣದ ತನಿಖೆಗೆ ಪೊಲೀಸರಿಗೆ ಮುಕ್ತ ಸ್ವಾತಂತ್ರ್ಯ ಕೊಟ್ಟಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.


ಶ್ರೀಗಳ ಬಂಧನದಲ್ಲಿ ವಿಳಂಬವಾಗಿದೆ ಎಂಬ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಲು ಅವರು ನಿರಾಕರಿಸಿದ್ದಾರೆ. ಈ ಎಲ್ಲ ಮಾತುಗಳಿಗೆ ಉತ್ತರಿಸುವ ಅಗತ್ಯವಿಲ್ಲ. ಕಾನೂನು ಪ್ರಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಈಗಾಗಲೇ ಹೇಳಿದ್ದೇನೆ. ಪ್ರಸಕ್ತ ಪರಿಸ್ಥಿತಿಯಲ್ಲಿ ಪ್ರಕರಣದ ಬಗ್ಗೆ ಹೇಳಿಕೆ ನೀಡುವುದು ಸರಿಯಾಗುವುದಿಲ್ಲ ಎಂದವರು ಹೇಳಿದ್ದಾರೆ.

## ಪೋಕ್ಸೋ : ಮಹಿಳಾ ವಾರ್ಡನ್ 14 ದಿನ ಕಸ್ಟಡಿಗೆ

ಚಿತ್ರದುರ್ಗ, ಸೆ. 2 - ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರ ವಿರುದ್ಧ ದಾಖಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ಎರಡನೇ ಆರೋಪಿಯಾಗಿರುವ ಮಹಿಳಾ ವಾರ್ಡನ್ ಬಂಧಿಸಲಾಗಿದ್ದು, 14 ದಿನಗಳ ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿದೆ. ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಎರಡನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೋಮಲಾ ಅವರು, ವಿಚಾರಣೆ ನಡೆಸಿ ಈ ಆದೇಶ ಹೊರಡಿಸಿದ್ದಾರೆ.

**ಆತ್ಮಹತ್ಯೆಗೆ ಯತ್ನ :** ಪೋಕ್ಸೋ ಪ್ರಕರಣದಲ್ಲಿ ಮುರುಘಾ ಶರಣರು ಸಿಲುಕಿದ್ದರಿಂದ ಬೇಸತ್ತು ಶ್ರೀಗಳ ಶಿಷ್ಯರಾಗಿರುವ ನಾಯಕನಹಟ್ಟಿ ಮಠದ ತಿಪ್ಪೇರುದ್ರಸ್ವಾಮಿ ಅವರು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಡೆದಿದೆ. ಸ್ಥಳದಲ್ಲೇ ಇದ್ದ ಪೊಲೀಸರು ಅವರನ್ನು ರಕ್ಷಿಸಿದ್ದಾರೆ. ಹಿಂದೊಮ್ಮೆ ಯೋಗವನ ಬೆಟ್ಟ ಮಠ ಪೀಠಾಧ್ಯಕ್ಷ ಸ್ಥಾನ ಕೈತಪ್ಪಿದೆ ಎಂಬ ಕಾರಣಕ್ಕಾಗಿ ಸಾರಿಗೆ ಸಚಿವ ಶ್ರೀರಾಮುಲು ಮುಂದೆ ತಿಪ್ಪೇರುದ್ರಸ್ವಾಮಿ ಅವರು ಆತ್ಮಹತ್ಯೆ ಯತ್ನ ನಡೆಸಿದ್ದರು.


## 11ನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಪಾಂಡುರಂಗ ಕೃಷ್ಣ ಕುರ್ಡೇಕರ್ (ಉತ್ತಂಗಿ)**

ನಿಧನ : 05.09.2011

ನೀವು ನಮ್ಮನ್ನಗಲಿ ಹನ್ನೊಂದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಶ್ರೀ ವೆಂಕಟೇಶ್ ಪಿ. ಕುರ್ಡೇಕರ್ (ಉತ್ತಂಗಿ) ಹಾಗೂ ಸಹೋದರರು,
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು,
ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

**ಉತ್ತಂಗಿ ಜ್ಯುವೆಲರ್ಸ್**

✦ ಚೌಕಿಪೇಟೆ, ✦ ಬೆಳ್ಳೂಡಿ ಗಲ್ಲಿ, ✦ ಎನ್. ಆರ್. ರಸ್ತೆ,
ಮೊ : 92428-66452, 99169-31295




### ವಿನಾಯಕನ ವಿಸರ್ಜನೆ

ಗಣಪತಿ ಮೂರ್ತಿ ಪ್ರತಿಷ್ಠಾಪಿಸಿ ಮೂರನೇ ದಿನವಾದ ಶುಕ್ರವಾರ ಹಲವೆಡೆ ವಿಸರ್ಜಿಸಲಾಯಿತು. ನಗರಕ್ಕೆ ಸಮೀಪದ ಚಾನಲ್ ಬಳಿ ವಿಗ್ರಹ ವಿಸರ್ಜಿಸುತ್ತಿರುವ ಭಕ್ತರು.

## ಮಹಾಂತ ರುದ್ರ ಶ್ರೀಗಳಿಗೆ ಮುರುಘಾ ಮಠದ ಉಸ್ತುವಾರಿ



ಚಿತ್ರದುರ್ಗ, ಸೆ. 2- ಪೋಕ್ಸೋ ಪ್ರಕರಣದಲ್ಲಿ ಸಿಲುಕಿರುವ ಚಿತ್ರದುರ್ಗ ಶ್ರೀ ಶಿವಮೂರ್ತಿ ಮುರುಘಾ ಶರಣರು ಬಂಧನಕ್ಕೊಳಗಾಗಿರುವ ಹಿನ್ನೆಲೆಯಲ್ಲಿ, ಐತಿಹಾಸಿಕ ಮುರುಘಾ ಮಠದ ತಾತ್ಕಾಲಿಕ ಉಸ್ತುವಾರಿಯನ್ನು ದಾವಣಗೆರೆ ತಾಲ್ಲೂಕಿನ (5ನೇ ಪುಟಕ್ಕೆ)

## ದೇಶದಲ್ಲಿ ಜನಸಂಖ್ಯಾ ಕುಸಿತದ ಯುಗಾರಂಭ?

### 2025ರ ವೇಳೆಗೆ ಶಾಲಾ ದಾಖಲಾತಿ 14% ಕುಸಿತ

ನವದೆಹಲಿ, ಸೆ. 2 – 2011ರ ನಂತರ ಶಾಲೆಗೆ ದಾಖಲಾಗುವ ಮಕ್ಕಳಲ್ಲಿ ಇಳಿಕೆಯಾಗುತ್ತಿದೆ. 2025ರ ವೇಳೆಗೆ ಶಾಲೆಗೆ ದಾಖಲಾಗುವ ಮಕ್ಕಳ ಪ್ರಮಾಣ ಶೇ.14ರಷ್ಟು ಇಳಿಕೆಯಾಗಲಿದೆ ಎಂದು ಎನ್.ಸಿ.ಇ.ಆರ್.ಟಿ. ಅಧ್ಯಯನ ತಿಳಿಸಿದೆ.

ಇದು ದೇಶದಲ್ಲಿ ಜನಸಂಖ್ಯಾ ಕುಸಿತದ ಯುಗ ಆರಂಭವಾಗುವ ಸೂಚನೆಯೇ ಎಂಬ ಪ್ರಶ್ನೆ ಉದ್ಭವಿಸಿದೆ. ಇತ್ತೀಚಿನ ವರ್ಷಗಳಲ್ಲಿ ದೇಶದ ಜನಸಂಖ್ಯೆ ಏರಿಕೆಯ ದರ ನಿರಂತರವಾಗಿ ಕುಸಿಯುತ್ತಿದೆ.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಶಾಲೆಗೆ ದಾಖಲಾಗುವ ಪ್ರಮಾಣ ಮುಂದಿನ 5-10 ವರ್ಷಗಳವರೆಗೆ ಬದಲಾಗುವುದಿಲ್ಲ. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ದಾಖಲಾಗುವ ಸಂಖ್ಯೆ 2023-24ರ ನಂತರ ಏರಿಕೆಯಾಗುವುದಿಲ್ಲ ಎಂದು ಎನ್.ಸಿ.ಇ.ಆರ್.ಟಿ. ನಡೆಸಿದ ಶಿಕ್ಷಣ ಸಮೀಕ್ಷಾ ವರದಿ ತಿಳಿಸಿದೆ.

2011ರಲ್ಲಿ 21 ರಾಜ್ಯಗಳು ಹೊಂದಿದ್ದ ಜನಸಂಖ್ಯೆ ಅಧ್ಯಯನ ನಡೆಸಿ ಈ ವರದಿಯನ್ನು ರೂಪಿಸಲಾಗಿದೆ. 2011ರ ವರೆಗೂ ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಬಂದಿತ್ತು. ನಂತರದಲ್ಲಿ ಇಳಿಕೆ ಕಂಡು ಬರುತ್ತಿದೆ. 2025ರವರೆಗೂ ಇದೇ ಪರಿಸ್ಥಿತಿ ಇರಲಿದೆ ಎಂದು ವರದಿಯಲ್ಲಿ (4ನೇ ಪುಟಕ್ಕೆ)

## ಹೆರಿಗೆ ವೇಳೆ ಸಾವು : ಕೇಂದ್ರ ಉದ್ಯೋಗಿಗೆ 60 ದಿನ ರಜೆ

ನವದೆಹಲಿ, ಸೆ. 2 – ಕೇಂದ್ರ ಸರ್ಕಾರಿ ನೌಕರಿಯಲ್ಲಿರುವ ಮಹಿಳಾ ಉದ್ಯೋಗಿಗಳ ಹೆರಿಗೆಯ ವೇಳೆ ಶಿಶು ಸಾವನ್ನಪ್ಪಿದರೆ 60 ದಿನಗಳ ವಿಶೇಷ ಮಾತೃತ್ವ ರಜೆ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಈ ಬಗ್ಗೆ ಆದೇಶ ಹೊರಡಿಸಿರುವ ಕೇಂದ್ರ ಸಿಬ್ಬಂದಿ ಹಾಗೂ ತರಬೇತಿ (5ನೇ ಪುಟಕ್ಕೆ)

**ಕರ್ನಾಟಕ ಗೃಹಮಂಡಳಿಯಲ್ಲಿ**
ಸೈಟುಗಳು, ಮನೆ ಮಾರಾಟಕ್ಕಿವೆ
30x50 East ಮನೆ, 50 ಲಕ್ಷಕ್ಕೆ. 30x40 North, 30x40 South, 30x50 ಕಾರ್ನರ್ 40x60 West, 40x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆಯಲ್ಲಿ 1ನೇ ಹಂತದಲ್ಲಿ 30x40 ಪೂರ್ವ 2ನೇ ಹಂತದಲ್ಲಿ 30x40 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
**97421 44715**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಸಂಬಳ : 8,000 -10,000 /-
ವಿನೋಬನಗರ ಬಸ್ ಸ್ಟಾಪ್ ಪಿ.ಬಿ ರೋಡ್ ದಾವಣಗೆರೆ.
ಸಂಪರ್ಕಿಸಿ :
**91130 53483**

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000. ಊಟ, ರೂಂ ಉಚಿತ. ಸಂಪರ್ಕಿಸಿ :
**97400 98047, 97400 98064**

**WANTED**
1. Recepionist
2. Staff Nurses
3. Lab Technician
**SHILPA DIAGNOSTICS**
MCC B Block Near Swimming Pool, Davangere.
**98440 65638**

**ಬೇಕಾಗಿದ್ದಾರೆ**
ಟಾರ್ಪಲಿನ್ ಬ್ಯಾಗ್, ಬಟ್ಟೆಯಲ್ಲಿ ಬ್ಯಾಗ್ ಹೊಲೆಯಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿರಿ :
**ವಿ.ಬಿ. ಟಾರ್ಪಲಿನ್ ಬ್ಯಾಗ್ ಅಂಗಡಿ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ.
**ಫೋ. : 99642 21766**

**ಬೇಕಾಗಿದ್ದಾರೆ**
ಫುಡ್‌ಮಾರ್ಟ್ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: PUC / Any Degree
**ಮೊ:98864 63531**

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. Rs.1099sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30×40, 30×50
**98441 24217, 94481 55202**
**86603 11021, 93431 10009**

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ತರಳಬಾಳು ಬಡಾವಣೆ, ದಾವಣಗೆರೆ.
ಸಂಪರ್ಕಿಸುವ ಸಮಯ :
ಬೆ.11.00 ರಿಂದ ಸಂಜೆ 7.00ವರೆಗೆ
**ಫೋ. : 08192 254736**

**2BHK HOUSE FOR RENT**
# "Sri Ramalingeshwara nilaya", KB Exten, 2nd main, 2nd cross, Davangere. East facing, House measurements: 18x40 sqr feet. Contact :
**98449 38391 77605 34680**

**ಕೆಲಸಕ್ಕೆ ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಕನ್ನಡ ಇಂಗ್ಲೀಷ್ ಓದಲು ಬರೆಯಲು ಬರುವ ಮತ್ತು ಕಂಪ್ಯೂಟರ್ ಜ್ಞಾನವುಳ್ಳ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ. (ಮಾರ್ಕೆಟಿಂಗ್ ಮತ್ತು ಆಫೀಸ್ ವರ್ಕ್) ಸಂಪರ್ಕಿಸಿ :
**ರಕ್ಷಾ ಅಸೋಸಿಯೇಟ್ಸ್**, ಲಾಯರ್ ರೋಡ್, ದಾವಣಗೆರೆ.
**91647 16836**

**ಮಳಿಗೆ ಹಾಗೂ ಗೋಡನ್ ಲೀಸ್‌ಗೆ ದೊರೆಯುತ್ತವೆ**
ಪವರ್ 15 HP
ಸೈಜ್ - 16x100
ಪೂನಾ-ಬೆಂಗಳೂರು ರಸ್ತೆ, ಆವರಗೆರೆ.
**72045 77823**

**ಬೇಕಾಗಿದ್ದಾರೆ**
PUC + Any Degree ಆಗಿರುವ ಯುವತಿಯರು ಬೇಕಾಗಿದ್ದಾರೆ. ಆಫೀಸ್ ವರ್ಕ್ ಪಾರ್ಟ್ ಟೈಮ್/ ಫುಲ್ ಟೈಮ್
ಸಂಬಳ: 8 To 10 K
Chinmayi Enterprises
Davanagere
**84310 22744**

**ಮನೆ ಬಾಡಿಗೆಗೆ**
ಹರಿಹರ ದೇವಾಲಯದ ಆವರಣದಲ್ಲಿ 1ಬೆಡ್ ರೂಂ ಮನೆ ಬಾಡಿಗೆಗೆ, ಸಸ್ಯಹಾರಿಗಳಿಗೆ ಮಾತ್ರ, ರೂ. 5000/- ಬಾಡಿಗೆ, ಅಡ್ವಾನ್ಸ್ : ರೂ. 25,000, 24 ಗಂಟೆಗಳ ನೀರು, ಪ್ರಶಾಂತ ವಾತಾವರಣವಿದೆ.
**94814 56017, 94819 01103**
ಗಿರಿಜಾ ಹೆಗಡೆ

**ಬೇಕಾಗಿದ್ದಾರೆ**
ಸಾನ್ವಿ ರೆಸ್ಟೋರೆಂಟ್ ಹೋಟೆಲ್‌ನಲ್ಲಿ ಕೆಲಸ ಮಾಡಲು ಸಪ್ಲೇಯರ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
**70222 20554**
**80889 55916**

**ಬೇಕಾಗಿದ್ದಾರೆ**
ಮನೆಯಲ್ಲಿ ಸಸ್ಯಹಾರಿ ಅಡುಗೆ ಕೆಲಸ ಮಾಡಲು ವೀರಶೈವ-ಲಿಂಗಾಯಿತ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
**ಮೊ. : 98455 11290**

**Take care of your Body (Gym)**
Fitness is not about looking good, Its about feeling confidence, strong, unstoppable and beautiful in your skin. Exercise- Daiting-Teaching-Partner work.
100% ಫಲಿತಾಂಶ ಕೇವಲ 12 ವಾರದಲ್ಲಿ.
**77953 16849, 74060 96987**

**WANTED**
1. Computer Teacher-1
Quli : B.Com. + Computer, BCA
2. Tailoring Teacher -1
Any Degree, Tailoring Certificate
3. Nursery Teacher + HM
BA B.Ed., B.Sc., B.Ed., RBST or NTC
**HOLYFAITH INTERNATIONAL SCHOOL**
Mitlakatte Salakatte Road, Near Chowdamma Temple, Harihar (T), Davangere (D)
**73493 97287, 97417 46205**

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
**ಕೆಲಸ / JOB**
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
**91084 18233, 97432 17566**

**WANTED**
**Accountant**
Qualification B.Com, BBM, MBA.
Requirement for Davangere Branch
Experience 2 Year Tally ERP 9
**Sri Lakshmi Venkateshwara Granites & Marbles**
# 2002/1 to 2002/7, Taralabalu Extn., Hadadi Main Road, Davangere-577004.
E-mail : slvgmdvg2010@gmail.com
**97422-70483, 90086-60111**

**JOBS**
Sales Manager/Executives any degree (English, Computer Knowledge) Office job/Marketing/ Field work, Male/Female Freshers/experienced
**98444 92888**


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
**ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹರಿಹರ–577602**
ಫೋನ್ 08192–242264. eo_tp_har@yahoo.com
ಸಂ.ತಾಪಂಹ:ಬಹಿರಂಗ ಹರಾಜು/2022–23 ದಿ:01.09.2022

**ಬಹಿರಂಗ ಹರಾಜ ಇಸ್ತಿಹಾರ್**

ದಿನಾಂಕ:06/09/2022ರಂದು ಬೆಳಿಗ್ಗೆ 11.00ಗಂಟೆಗೆ ಹರಿಹರ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಹರಿಹರ ತಾಲ್ಲೂಕಿನ ಹೊಳೆಸಿರಿಗೆರೆ ಗ್ರಾಮ ಪಂಚಾಯಿತಿಯ ಹೊಳೆಸಿರಿಗೆರೆ ಗ್ರಾಮದ ರಿ.ಸ.ನಂ.174 ಮತ್ತು 175 ರಲ್ಲಿನ 25 ಎಕರೆ ಪ್ರದೇಶದಲ್ಲಿರುವ ತೆಂಗಿನ ಫಸಲನ್ನು ದಿನಾಂಕ:07/09/2022 ರಿಂದ 06/09/2025ರವರೆಗೆ 03ವರ್ಷದ ಅವಧಿಗೆ ಬಹಿರಂಗ ಹರಾಜು ಮಾಡುತ್ತಿದ್ದು, ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ರೂ.30,000–(ರೂ. ಮೂವತ್ತು ಸಾವಿರ ಮಾತ್ರ)ಗಳ ಮೊತ್ತವನ್ನು ಠೇವಣಿಯಾಗಿರಿಸಿ ಭಾಗವಹಿಸಬಹುದಾಗಿದೆ.
ಹರಾಜಿನ ಹೆಚ್ಚಿನ ಷರತ್ತುಗಳ ಮಾಹಿತಿಯನ್ನು ಹರಿಹರ ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ಮತ್ತು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪಡೆಯಬಹುದಾಗಿದೆ ಎಂದು ಸಾರ್ವಜನಿಕರಲ್ಲಿ ವಿನಂತಿಸಿದೆ.

ವಾಸಾಇ/ದಾವಣಗೆರೆ/422/ಎಂಸಿಎ/2022–23
**ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹರಿಹರ.**



## ಶ್ರೀ ವೀರಭದ್ರೇಶ್ವರ ಜಯಂತ್ಯೋತ್ಸವ

ಮಲೇಬೆನ್ನೂರಿನಲ್ಲಿ ಮಂಗಳವಾರ ಶ್ರೀ ವೀರಭದ್ರೇಶ್ವರ ಸ್ವಾಮಿಯ ಜಯಂತ್ಯೋತ್ಸವದ ಅಂಗವಾಗಿ ವೀರಭದ್ರೇಶ್ವರ ದೇವಸ್ಥಾನದಿಂದ ಹಮ್ಮಿಕೊಂಡಿದ್ದ ಬೃಹತ್ ಗುಗ್ಗಳ ಮತ್ತು ವೀರಗಾಸೆ ಭಕ್ತರ ಗಮನ ಸೆಳೆಯಿತು.

# ಜಿಎಂಐಟಿಯಲ್ಲಿ ಇಂದು ಅಂತರರಾಷ್ಟ್ರೀಯ ಶಿಕ್ಷಣ ಮೇಳ

ದಾವಣಗೆರೆ, ಸೆ.2- ಹೊರದೇಶಗಳಲ್ಲಿ ಉನ್ನತ ಶಿಕ್ಷಣ ಸೇರ ಬಯಸುವ ವಿದ್ಯಾರ್ಥಿಗಳಿಗಾಗಿ ಅಂತರಾಷ್ಟ್ರೀಯ ಶಿಕ್ಷಣ ಮೇಳವನ್ನು ನಾಳೆ ದಿನಾಂಕ 3ರ ಶನಿವಾರ ನಗರದ ಜಿಎಂಐಟಿ ಕಾಲೇಜಿನ ಕೇಂದ್ರ ಗ್ರಂಥಾಲಯದಲ್ಲಿ ಆಯೋಜಿಸಿದೆ.

ಜಿಎಂ ತಾಂತ್ರಿಕ ಮಹಾ ವಿದ್ಯಾಲಯವು ಕೆಸಿ ಓವರ್ಸಿಸ್ ಎಜುಕೇಶನ್ (ಚಿತ್ರದುರ್ಗ) ಇವರ ಸಹಕಾರ ಮತ್ತು ಸಹಯೋಗದಲ್ಲಿ ಅಂತರಾಷ್ಟ್ರೀಯ ಶಿಕ್ಷಣ ಮೇಳವನ್ನು ನಾಳೆ ಶನಿವಾರ ಬೆಳಿಗ್ಗೆ 9ಕ್ಕೆ ಕಾರ್ಯಕ್ರಮವನ್ನು ಉದ್ಘಾಟಿಸುವ ಮೂಲಕ ಚಾಲನೆ ನೀಡಲಾಗುವುದು.

ಸಂಜೆ 5 ರವರೆಗೆ ಕಾರ್ಯಕ್ರಮ ನಡೆಯಲಿದೆ ಎಂದು ಕೆಸಿ ಓವರ್ಸಿಸ್ ಎಜುಕೇಶನ್ ಸಂಯೋಜಕರಾದ ಸವಿತಾ ಹಾಗೂ ರೂಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ಟಿ.ಆರ್. ತೇಜಸ್ವಿ ಕಟ್ಟಿಮನಿ ಮಾತನಾಡಿ, ಅನೇಕ ವಿದ್ಯಾರ್ಥಿಗಳಿಗೆ ವಿದೇಶ ಉನ್ನತ ಶಿಕ್ಷಣದ ಬಗ್ಗೆ ತಿಳಿಯುವ ಕುತೂಹಲ ಮತ್ತು ಸೇರ ಬಯಸುವ ಆಸಕ್ತಿ ಇದ್ದು, ಅಂತಹ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಮೇಳವು ಸಹಕಾರಿಯಾಗಲಿದೆ.

ಆಸಕ್ತ ವಿದ್ಯಾರ್ಥಿಗಳು ತಮ್ಮ ವಿವರಗಳನ್ನು ನೋಂದಾಯಿಸಲು https://www.studies-overseas.com/overseas-education-fair/gmit ಲಿಂಕ್ ಬಳಸಬಹುದು.

# ಮಂಗಳೂರಿನಲ್ಲಿ 3,800 ಕೋಟಿ ರೂ.ಗಳ ಯೋಜನೆಗೆ ಪ್ರಧಾನಿ ಮೋದಿ ಶಿಲಾನ್ಯಾಸ

**'ಡಬಲ್ ಇಂಜಿನ್' ನಿಂದ ಆಶೋತ್ತರ ಈಡೇರಿಸಿದ್ದೇವೆ**

ಮಂಗಳೂರು, ಸೆ. 2 - ಕೇಂದ್ರ ಹಾಗೂ ರಾಜ್ಯದಲ್ಲಿರುವ ಡಬಲ್ ಇಂಜಿನ್ ಸರ್ಕಾರದ ಮೂಲಕ ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಮಂಗಳೂರಿನಲ್ಲಿ 3800 ಕೋಟಿ ರೂ. ಮೊತ್ತದ 8 ಯೋಜನೆಗಳ ಲೋಕಾರ್ಪಣೆ ಹಾಗೂ ಶಿಲಾನ್ಯಾಸವನ್ನು ನೆರವೇರಿಸಿ ಮಾತನಾಡಿದ ಅವರು, ಕಳೆದ ಎಂಟು ವರ್ಷಗಳಲ್ಲಿ ಮೂಲಸೌಕರ್ಯ ಕ್ಷೇತ್ರದಲ್ಲಿ ಮಾಡಲಾಗಿರುವ ಪ್ರಗತಿಯಲ್ಲಿ ದೊಡ್ಡ ಪಾಲು ಕರ್ನಾಟಕಕ್ಕೆ ಲಭಿಸಿದೆ ಎಂದಿದ್ದಾರೆ.

ಸಾಗರ ಮಾಲಾ ಯೋಜನೆ, ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ, ರೈಲ್ವೇ ಹಳಿಗಳ ವಿದ್ಯುದೀಕರಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಾಲ್ಕು ಪಟ್ಟು ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗಿದೆ.

ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದಲ್ಲಿ ಮನೆಗಳಿಗೆ ನೇರವಾಗಿ ಕುಡಿಯುವ ನೀರು ಪೂರೈಕೆ ಮಾಡಲಾಗಿದೆ. ಪ್ರಧಾನಮಂತ್ರಿ ಆಯುಷ್ಮಾನ್ ಯೋಜನೆಯಡಿ 30ಲಕ್ಷ ಫಲಾನುಭವಿಗಳಿಗೆ 4ಸಾವಿರ ಕೋಟಿ ರೂ. ಮೊತ್ತದ ವೈದ್ಯಕೀಯ ಸೇವೆಯನ್ನು ಉಚಿತವಾಗಿ ನೀಡಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ.

ದೇಶದ ಪ್ರಥಮ ಸ್ವದೇಶಿ ವಿಮಾನ ವಾಹಕ ನೌಕೆಯನ್ನು ಇಂದು ಕೊಚ್ಚಿಯಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಕೇಂದ್ರ ಸರ್ಕಾರ ದೇಶದ ಸೇನಾ ಸುರಕ್ಷತೆಗೆ ಹಾಗೂ ಆರ್ಥಿಕ ಸುರಕ್ಷತೆಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಮೋದಿ ಇದೇ ವೇಳೆ ತಿಳಿಸಿದ್ದಾರೆ.

ನವ ಮಂಗಳೂರು ಬಂದರಿನಲ್ಲಿ ಮೂಲಸೌಲಭ್ಯಗಳ ಅಭಿವೃದ್ಧಿಗೆ 3800 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, ಇದರಿಂದ ದೇಶದ ಆರ್ಥಿಕತೆಗೆ ಮಾತ್ರವಲ್ಲದೆ ಸ್ಥಳೀಯವಾಗಿ ಹೆಚ್ಚಿನ ಉದ್ಯೋಗವಕಾಶ ಸೃಷ್ಟಿ ಸಾಧ್ಯವಾಗಲಿದೆ ಎಂದು ಮೋದಿ ಹೇಳಿದ್ದಾರೆ.

ಇದರಿಂದ ಮುಂದಿನ ದಿನಗಳಲ್ಲಿ ಕರಾವಳಿ ಮಾತ್ರವಲ್ಲದೆ, ರಾಜ್ಯದ ಅಭಿವೃದ್ಧಿ ಸಾಧ್ಯವಾಗಲಿದೆ. ನವಭಾರತದ ನಿರ್ಮಾಣದಲ್ಲಿ ನಮ್ಮ ಕರ್ನಾಟಕ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದ್ದಾರೆ.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಷಿ ಸರ್ಬಾನಂದ್ ಸೋನೊವಾಲ, ಶ್ರೀಪಾದ್ ನಾಯಕ್, ಶಾಂತನು ಠಾಕೂರ್, ಶೋಭಾ ಕರಂದ್ಲಾಜೆ, ಸಂಸದ ನಳಿನ್ ಕುಮಾರ್ ಕಟೀಲ್, ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಎಸ್.ಅಂಗಾರ, ಸುನೀಲ್ ಕುಮಾರ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

# ಚುನಾವಣಾ ಸಿದ್ಧತೆ ಪರಿಶೀಲನೆ

(1ನೇ ಪುಟದಿಂದ) ಪ್ರಶ್ನೆಗಳಿಗೆ ಉತ್ತರ ಒದಗಿಸಿ, ಪರಿಹಾರ ಕಂಡು ಹಿಡಿಯುವುದು ನಮ್ಮ ಕರ್ತವ್ಯ ಎಂದು ಕಿವಿಮಾತು ಹೇಳಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆ ಸಮೀಪವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅಪಸ್ವರಗಳಿಗೆ ಎಡೆಮಾಡಿಕೊಡಬೇಡಿ, ಒಂದು ಭಾಗದಲ್ಲಿ ಅಭಿವೃದ್ಧಿ ಕೆಲಸವಾದರೆ, ಮತ್ತೊಂದು ಭಾಗದಲ್ಲಿ ಸಂಘಟನೆ ಬಲಿಷ್ಠಗೊಳ್ಳಬೇಕು ಎಂದವರು ಹೇಳಿದ್ದಾರೆ.

ಮುಖಂಡರುಗಳು ಪ್ರತಿಪಕ್ಷಗಳನ್ನು ಎದುರಿಸಿ, ಸಾರ್ವಜನಿಕರಲ್ಲಿ ಪಕ್ಷದ ಬಗ್ಗೆ ಒಲವು ಮೂಡಿಸುವ ಕೆಲಸ ನಡೆಯಲಿ. ಚುನಾವಣೆ ಸಮಯದಲ್ಲಿ ಕೈಕಟ್ಟಿ ಕುಳಿತುಕೊಳ್ಳುವುದಲ್ಲ. ಮುಖಂಡರು ಮತ್ತು ಕಾರ್ಯಕರ್ತರು, ಮನೆ ಬಾಗಿಲಿಗೆ ತೆರಳಿ, ಜನರಿಗೆ ಕೇಂದ್ರ ಮತ್ತು ಸರ್ಕಾರದ ಸಾಧನೆಗಳನ್ನು ತಿಳಿಸುವ ಕೆಲಸ ನಡೆಯಬೇಕು. ಕಾರ್ಯಕರ್ತರಲ್ಲಿ ಹುರಿದುಂಬಿಸುವ ಬೃಹತ್ ಸಮಾವೇಶ ಮತ್ತು ರೋಡ್‌ಶೋಗಳನ್ನು ನಡೆಸಿ ಎಂದು ಸೂಚಿಸಿದ್ದಾರೆ.

ಎಲ್ಲ ಸಮಾಜದರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಅಷ್ಟೇ ಅಲ್ಲ ಎಲ್ಲ ವರ್ಗದ ಜನರು ಮತ್ತು ರೈತರನ್ನು ಪಕ್ಷದತ್ತ ಸೆಳೆಯಲು ಕಾರ್ಯಕ್ರಮ ರೂಪಿಸಿ ಎಂದಿದ್ದಾರೆ.

ನಮ್ಮಿಂದ ನಿಮಗೆ ಏನು ಆಗಬೇಕು, ಅದರ ಪಟ್ಟಿ ಮಾಡಿ ನಮಗೆ ಕಳುಹಿಸಿ, ಕಾನೂನಾತ್ಮಕವಾಗಿದ್ದರೆ, ಅವುಗಳಿಗೆ ತಕ್ಷಣವೇ ಹಸಿರು ನಿಶಾನೆ ನೀಡಲಾಗುವುದು ಎಂದು ಮೋದಿ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಸಭೆಯಲ್ಲಿ ಯಡಿಯೂರಪ್ಪನವರಿಗೆ ಹೆಚ್ಚು ಒತ್ತು ನೀಡಿದ ಪ್ರಧಾನಿ ಮೋದಿ, ಕೆಲವೊಮ್ಮೆ ನಾಯಕರಿಗೆ ಪರೋಕ್ಷವಾಗಿ ಚಾಟಿ ಬೀಸಿದ್ದಾರೆ.

ಚುನಾವಣೆಗಾಗಿ ಪಕ್ಷ ಮತ್ತು ಸರ್ಕಾರದಲ್ಲಿ ಬದಲಾವಣೆ ತರಬೇಕೆ ಎಂಬ ಬಗ್ಗೆಯೂ ರಾಜ್ಯ ನಾಯಕರಿಂದ ಪ್ರಧಾನಿಯವರು ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ.

ಪ್ರಧಾನಿಯವರು ಕರೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ್ ಶೆಟ್ಟರ್, ಸಚಿವರಾದ ಆರ್. ಅಶೋಕ್, ಅಶ್ವತ್ಥನಾರಾಯಣ್, ಗೋವಿಂದ ಕಾರಜೋಳ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿಟಿ. ರವಿ, ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಭಾಗವಹಿಸಿದ್ದರು.

## ಪ್ರತಿಭಾ ಕಾರಂಜಿ : ತಾಲ್ಲೂಕು ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಸೆ. 2- ನಗರದ ನಂದಗೋಕುಲ ಶಾಲೆಯ ವಿದ್ಯಾರ್ಥಿಗಳು ಕಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾಗಿ ತಾಲ್ಲೂಕು ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ಜನಸಂಖ್ಯಾ ಕುಸಿತದ ಯುಗಾರಂಭ?

(1ನೇ ಪುಟದಿಂದ) ಹೇಳಲಾಗಿದೆ. ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆ 2011ಕ್ಕೆ ಹೋಲಿಸಿದರೆ 2025ರಲ್ಲಿ ಶೇ.14.37ರಷ್ಟು ಕಡಿಮೆಯಾಗಲಿದೆ.

ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಶೇ.13.28 ಹಾಗೂ ವಿದ್ಯಾರ್ಥಿನಿಯರ ದಾಖಲಾತಿ ಪ್ರಮಾಣ ಶೇ.15.5 4ರಷ್ಟು ಕಡಿಮೆಯಾಗಲಿದೆ ಎಂದು ವರದಿ ತಿಳಿಸಿದೆ.

2016 ರಿಂದ ಇನ್ನತ ಪ್ರಾಥಮಿಕ ಹಂತದಲ್ಲಿ ಇಳಿಕೆ ಆರಂಭವಾಯಿತು. ಮಾಧ್ಯಮಿಕ ಶಾಲೆಗಳಲ್ಲಿ ದಾಖಲಾತಿ 2020ರಿಂದ ಇಳಿಕೆಯಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ಶ್ರೀಗಳ ಪ್ರಕರಣ ಸಿಬಿಐಗೆ ವಹಿಸಿ

(1ನೇ ಪುಟದಿಂದ) ಚಿತ್ರದುರ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

ಪ್ರಕರಣದ ಪಾರದರ್ಶಕ ತನಿಖೆ ನಡೆಸುವ ಉದ್ದೇಶದಿಂದ ಸಿಬಿಐಗೆ ವಹಿಸಬೇಕು. ಮುರುಘಾ ಮಠವನ್ನು ಸೂಪರ್ ಸೀಡ್ ಮಾಡಿ ಸರ್ಕಾರದ ವಶಕ್ಕೆ ಪಡೆಯಬೇಕು. ಎಲ್ಲಾ ಮಠ ಹಾಗೂ ಧಾರ್ಮಿಕ ಸಂಸ್ಥೆಗಳಡಿ ನಡೆಯುವ ವಿದ್ಯಾಸಂಸ್ಥೆಗಳಲ್ಲಿರುವ ವಿದ್ಯಾರ್ಥಿನಿಯರಿಗೆ ಸೂಕ್ತ ರಕ್ಷಣೆ ನೀಡಬೇಕು.

ಮೈಸೂರಿನ ಒಡನಾಡಿ ಸಂಸ್ಥೆಯವರಿಗೆ ಬೆದರಿಕೆ ಇರುವುದರಿಂದ ರಕ್ಷಣೆ ಒದಗಿಸಬೇಕು ಎಂದು ಒಕ್ಕೂಟದಿಂದ ಆಗ್ರಹಿಸಿ, ಉಪ ವಿಭಾಗಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರೈತ ಮುಖಂಡ ಬಲ್ಲೂರು ರವಿಕುಮಾರ್, ದ.ಸಂ.ಸ ಮುಖಂಡ ಹೆಗ್ಗೆರೆ ರಂಗಪ್ಪ, ಸಿಪಿಐಎಂನ ಶ್ರೀನಿವಾಸ್, ಮಲ್ಲೇಶ್, ಸಿಐಟಿಯುನ ಆಂದರಾಜ್, ನೆರಳು ಬೀಡಿ ಕಾರ್ಮಿಕರ ಯೂನಿಯನ್‌ನ ಜಬೀನಾ ಖಾನಂ, ಕೆಟಿಜೆ ನಗರದ ಬಿ.ದುಗ್ಗಪ್ಪ, ಟಿ.ರವಿ, ಆಟೋ ತಿಮ್ಮಣ್ಣ, ಗುಮ್ಮನೂರು ರಾಮಚಂದ್ರ, ಅಳಗವಾಡಿ ನಿಂಗರಾಜ್, ಮೇಗಳಗೆರೆ ಮಂಜುನಾಥ್, ಅಳಗವಾಡಿ ಬಾಬು, ರೇಣುಕಾ ಯಲ್ಲಮ್ಮ, ಐರಣಿ ಚಂದ್ರು, ಬುಳ್ಳಾಪುರದ ಹನುಮಂತಪ್ಪ, ಇತರರು ಉಪಸ್ಥಿತರಿದ್ದರು.

## ಜಿಲ್ಲಾಮಟ್ಟಕ್ಕೆ ಎಸ್.ಕೆ.ಎ.ಹೆಚ್ ಶಾಲೆ ವಿದ್ಯಾರ್ಥಿಗಳ ತಂಡ



ದಾವಣಗೆರೆ, ಸೆ. 2- ತಾಲ್ಲೂಕು ಮಟ್ಟದ ವಾಲಿಬಾಲ್ ಕ್ರೀಡೆಯಲ್ಲಿ ನಗರದ ಬಾಷಾನಗರದ ಎಸ್.ಕೆ.ಎ. ಹೆಚ್ ಮಿಲ್ಲತ್ ಸಂಯೋಜಿತ ಪಿ.ಯು.ಕಾಲೇಜು ಹಿರಿಯ ಪ್ರಾಥಮಿಕ ವಿಭಾಗದ ಬಾಲಕ-ಬಾಲಕಿಯರು ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿಜೇತ ತಂಡಕ್ಕೆ ಸಂಸ್ಥೆ ಕಾರ್ಯದರ್ಶಿ ಸೈಯದ್ ಸೈಫುಲ್ಲಾ, ಜಂಟಿ ಕಾರ್ಯದರ್ಶಿ ಸೈಯದ್ ಖಾಲಿದ್ ಅಹಮದ್, ಆಡಳಿತಾಧಿಕಾರಿ ಸೈಯದ್ ಅಲಿ, ಉಪಪ್ರಾಂಶುಪಾಲ ಜಾಕೀರ್ ಹುಸೇನ್ ಎ. ಮತ್ತು ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.


**ಸೋಲಾರ್ ಸೇಲ್ಸ್ ಸರ್ವೀಸ್ & ಎಕ್ಸ್‌ಚೆಂಜ್**
ಸಂಪರ್ಕಿಸಿ :
**99642 84060**

**FOR SALE**
COMMERCIAL COMPLEX
Contact :
**86187 29175**

**ಸೈಟುಗಳು ಮಾರಾಟಕ್ಕಿವೆ**
30x40 West, 30x50 East, 30x50 West
M.B ಸಿಟಿಯಲ್ಲಿ ಶನೇಶ್ವರ ದೇವಸ್ಥಾನ ಹಿಂಭಾಗದಲ್ಲಿ ರೇಟ್ 1800/-
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಬೇಕಾಗಿದ್ದಾರೆ**
ಗ್ರಾಮೀಣ ಭಾಗದಲ್ಲಿ ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.
**94494 54688**

**ಗ್ಯಾಸ್ ಗೀಸರ್ ರಿಪೇರಿ**
ನಮ್ಮಲ್ಲಿ ಎಲ್ಲಾ ರೀತಿಯ ಗ್ಯಾಸ್ ಗೀಜರ್‌ಗಳ ರಿಪೇರಿ ಹಾಗೂ ಮಾರಾಟ ಮಾಡಲಾಗುತ್ತದೆ.
**ರತ್ನ ಮಾರ್ಕೆಟಿಂಗ್**
**9901940727**

**ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಮೆನ್ ಬೇಕಾಗಿದ್ದಾರೆ**
ಫೋಟೊ, ಆಧಾರ ಕಾರ್ಡ್ ನೋಂದಣಿ ಸಲಿಸಿ.
ಶಿಲ್ಪಕಲಾ ಸಿಲ್ಕ್ಸ್ ಸಾರೀಸ್, ಚಾಮರಾಜಪೇಟೆ, ಶಾಂತಲಾ ವೆಡ್ಡಿಂಗ್ ಮಾಲ್ ಪಕ್ಕ, ದಾವಣಗೆರೆ.
**ವ್ಯಾಟ್ಸಪ್ : 78926 28916, 88922 70559**

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಸಪ್ಲೆಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ. ಸಂಬಳ : 8000 ರೂ. ಊಟ + ವಸತಿ ಸೌಕರ್ಯವಿದೆ.
**81232 20799**

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
**80955 09025**
ಕೆಲಸ 100% ಗ್ಯಾರಂಟಿ.

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ**
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
**97402 58276**

**WANTED**
FIELD OFFICER
FOR SAFAJ SECURITY & SERVICE
**Walk in Interview**
Venue: Safaj Head Office, Davanagere.
P.B Road, Vinoba Nagar Bus Stop
**MD: 88678 53961**

**HOUSE FOR RENT/LEASE**
2 BHK Door No: 344, J.H Patel Nagar, 'A' Block 8th Main, Near Podar International School Dvg.
Contact:
**88617 11072**
**95359 99218**

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.


**ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ ಉಪವಿಭಾಗ, ದಾವಣಗೆರೆ.**

ಪ್ರಕರಣ ಸಂಖ್ಯೆ ಆರ್.ಎ.ಸಿ.ಆರ್.201/2021 ದಿನಾಂಕ : 25.08.2022

ಅಪೀಲುದಾರರು : **ಎಸ್.ಬಿ ಸಂತೋಷ್ ಬಿನ್ ಲೇಟ್ ಬಸವಂತಪ್ಪ**, ವಾಸ : ಡೋ.ನಂ. 11, 1ನೇ ಮುಖ್ಯರಸ್ತೆ, ವಿಕಾಸನಗರ, ತಲ್ಲಿ ರಸ್ತೆ ಅಂದಿವಾಡಿ ಹತ್ತಿರ, ಹೊಸೂರು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು.

ವಿರುದ್ಧ

ಎದುರುದಾರರು : **1. ತಹಶೀಲ್ದಾರ್**, ಹರಿಹರ ತಾಲ್ಲೂಕು. **2. ಶ್ರೀ ಸತ್ಯಪ್ಪ ಬಿನ್ ಬುಡ್ರಿ ಗೋಣೆಪ್ಪ**, ವಾಸ : 1ನೇ ಮುಖ್ಯರಸ್ತೆ, 4ನೇ ಅಡ್ಡ ರಸ್ತೆ, ವಿನೋಬನಗರ, ದಾವಣಗೆರೆ.

**ವಿಷಯ : ಹರಿಹರ ತಾಲ್ಲೂಕು ಕಸಬಾ ಮಹಜೇನಹಳ್ಳಿ ಗ್ರಾಮದ ಸ.ನಂ. 28/ಪಿ (ಹೊಸ ಸ.ನಂ. 28/2) ರಲ್ಲಿ 0-02.08 ಗುಂಟೆ ಜಮೀನಿನ ಬಗ್ಗೆ.**

**ಪ್ರಕಟಣೆ**

ಪ್ರಸ್ತಾಪಿತ ಜಮೀನಿನ ವಿಚಾರವಾಗಿ ಈ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಾಗಿ ಪ್ರಕರಣ ವಿಚರಣಾ ಹಂತದಲ್ಲಿ ಇರುತ್ತದೆ. ಪ್ರಕರಣದ ವಿಚಾರಣೆಗೆ ಹಾಜರಾಗಲು 2ನೇ ಎದುರುದಾರರಿಗೆ ಕಳಿಸಿರುವ ನೋಟಿಸುಗಳು ಜಾರಿಯಾಗದೇ ಹಿಂದಕ್ಕೆ ಬಂದಿರುತ್ತವೆ. ಆದ್ದರಿಂದ 2ನೇ ಎದುರುದಾರರಿಗೆ/ಪರ ವಾರಸುದಾರರಿಗೆ ಈ ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಯಪಡಿಸುವುದೇನೆಂದರೆ, ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ : 08.09.2022ರಂದು ಮಧ್ಯಾಹ್ನ 3.00 ಗಂಟೆಗೆ ತಹಶೀಲ್ದಾರ್ ಹರಿಹರ ಇವರ ಕಾರ್ಯಾಲಯದ ನ್ಯಾಯಾಲಯ ಸಭಾಂಗಣದಲ್ಲಿ ನಿಗದಿಪಡಿಸಿದ್ದು, 2ನೇ ಎದುರುದಾರರು/ವಾರಸುದಾರರು ಖುದ್ದು ಅಥವಾ ತಮ್ಮ ವಕೀಲರ ಮುಖಾಂತರಲವಾಗಲೀ ದಾಖಲಾತಿಗಳೊಂದಿಗೆ ವಿಚಾರಣೆಗೆ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಏಕ ಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು. ಕಾರಣಾಂತರದಿಂದ ವಿಚಾರಣೆ ಮುಂದೂಡಿದಲ್ಲಿ ಮುಂದಿನ ಮುದ್ದತ್ತಿನ ದಿನಾಂಕವನ್ನು ತಾವೇ ತಿಳಿದುಕೊಂಡು ವಿಚಾರಣೆಗೆ ಹಾಜರಾಗಲು ಸೂಚಿಸಿದೆ.

**ಸಹಿ/- ಉಪವಿಭಾಗಾಧಿಕಾರಿ ಪರವಾಗಿ, ದಾವಣಗೆರೆ ಉಪವಿಭಾಗ.**

**IN THE COURT OF THE THIRD ADDITIONAL SENIOR CIVIL JUDGE, AT DAVANAGERE**

O.S. 141 / 2022

Plaintiffs : **Smt. Geetha Bai and another,** V/s
Defendants : **Sri. Harish and another,**
Defendant No.2 : **Sri. S. Suresh S/o Late. Shivaji Rao,** Aged 31 years, 1st floor, Door No.1096, 14th Cross, S. Nijalingappa Layout, DAVANAGERE.

**SUIT SUMMONS TO THE 2ND DEFENDANT BY SUBSTITUTED SERVICE BY PAPER PUBLICATION**

Whereas, the above named plaintiffs have filed the suit against the defendants for partition and separate possession of their 1/5th share each in the suit 'A' 'B' and 'C' schedule properties by metes and bounds and also for other consequential reliefs. The 2nd defendant has avoided the service of the suit summons sent to him through the Hon'ble Court and also by registered post with acknowledgement due. Hence, this publication.

Now, the 2nd defendant named above is called upon to take notice that the above suit is posted for appearance of the 2nd defendant to Ist day of October 2022, Hence, you are called upon to take notice to appear in the above suit on Ist day of October 2022 at 11.00 AM either personally or through an advocate, failing which all further proceedings will take place in your absence.

Given under my hand and seal on Ist Day of Sept 2022, Davangere.

Davangere
Date:01-09-2002

*By order of the court*
**Chief Administrative Officer,**
Principal Senior Civil Judge and CJM Court, Davangere.

**ಮಾನ್ಯ ಹಿರಿಯ ಚಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ITINARAY), ಜಗಳೂರು**

ಅಸಲು ದಾವಾ ನಂ.56/2021

ವಾದಿಗಳು : **ದಿ ಕರ್ನಾಟಕ ಬ್ಯಾಂಕ ಲಿ.** ವಿರುದ್ಧ
ಪ್ರತಿವಾದಿಗಳು : **ಶ್ರೀಮತಿ ಕರಿಬಸಮ್ಮ ಮತ್ತು ಇತರರು 4 ಶ್ರೀ ಮಂಜುನಾಥ್.ಹೆಚ್.ಬಿ. ಬಿನ್ ಬಸಪ್ಪ.ಹೆಚ್** ವಯಸ್ಸು ಸುಮಾರು 45 ವರ್ಷ, ವಾಸ : ಕಾಡಜ್ಜಿ ಗ್ರಾಮ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

ಆದೇಶ 5 ನಿಯಮ 20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ 4ನೇ ಪ್ರತಿವಾದಿಗೆ ದಾವೆಯ ಸಮನ್ಸ್ ಈ ಮೇಲ್ಕಂಡ ವಾದಿಯು ನಿಮ್ಮ ಮತ್ತು ಇತರರ ವಿರುದ್ಧ ಹಣ ಮತ್ತು ಬಡ್ಡಿ ವಸೂಲಾತಿಗಾಗಿ ದಾವೆಯನ್ನು ಹೂಡಿರುತ್ತಾರೆ. ಸದರಿ ದಾವಾದಲ್ಲಿ ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ 12.10.202ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಗ್ಗೆ 11.00 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲಸಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ದಾವೆಯಲ್ಲಿ ನಿಮ್ಮ ತಕರಾರು ಇರುವುದಿಲ್ಲ ಎಂದು ಪರಿಗಣಿಸಿ ಪ್ರಕರಣದ ಅರ್ಹತೆಯ ಆಧಾರದ ಮೇಲೆ ತೀರ್ಮಾನ ಮಾಡಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 1.9.2022ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶ ಮೇರೆಗೆ,
**ಶಿರಸ್ತೇದಾರರು,**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**(ಎ.ಎಂ ಹೆಗಡೆ)**
ವಾದಿಯರ ಪರ ವಕೀಲರು
ಸ್ಥಳ : ದಾವಣಗೆರೆ, ದಿನಾಂಕ : 1.09.2021


**WANTED**
FEMALE TELECALLEERS- 10 NOS
(Any Graduate- Fresher/ Experienced)
Communication skill is must
**Kesari Technologies**
#2756/6, 3rd Main, 4th Cross, MCC B Block, Davanagere
**97433 41341**

**ಬೇಕಾಗಿದ್ದಾರೆ**
Call Center-Girls
Accountant - Girls
Field Executive - Boys
**Sri Kuruvatti Basaveshwara Pharma**
College Road, P.J. Extn., Davangere.
**Ph. : 99160 67627**

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
**89716 99826**

# ನಾಡಿದ್ದು ರೇಣುಕಾ ಶಿವಾಚಾರ್ಯ ಮಹಾಸ್ವಾಮಿಗಳವರ ಜನ್ಮವರ್ಧಂತಿ

ದಾವಣಗೆರೆ, ಸೆ.2- ಚನ್ನಗಿರಿ ತಾಲ್ಲೂಕಿನ ಪುರಾತನ ಮಠ ಹಾಗೂ ಕೆಳದಿ ಅರಸರ ಕಾಲದಲ್ಲಿ ನಿರ್ಮಾಣವಾದ ತಾವರೆಕೆರೆ ಶ್ರೀ ಶಿಲಾಮಠದಲ್ಲಿ ಇದೇ ದಿನಾಂಕ 5 ಹಾಗೂ 6ರಂದು ಶ್ರೀ ರೇಣುಕಾ ಶಿವಾಚಾರ್ಯ ಮಹಾಸ್ವಾಮಿಗಳವರ 75ನೇ ಜನ್ಮವರ್ಧಂತಿ ಅಮೃತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ದಿನಾಂಕ 5ರ ಸೋಮವಾರ ಸಂಜೆ 5ಕ್ಕೆ ನಡಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ರಂಭಾಪುರಿ ಪೀಠದ ಜಗದ್ಗುರುಗಳು ವಹಿಸಲಿದ್ದಾರೆ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಶಾಸಕ ವಡ್ನಾಳ್ ರಾಜಣ್ಣ ಉದ್ಘಾಟನೆ ನೆರವೇರಿಸಲಿದ್ದಾರೆ. ಬಿಳಕಿ ಹಿರೇಮಠದ ರಾಜೋಟೇಶ್ವರ ಶಿವಾಚಾರ್ಯ ಶ್ರೀ ಹಾಗೂ ಮಹಾರಾಷ್ಟ್ರದ ರೇಣುಕಾ ಶಿವಾಚಾರ್ಯ ಶ್ರೀ ಅಭಿನಂದನಾ ನುಡಿಗಳನ್ನಾಡಲಿದ್ದಾರೆ ಎಂದು ಮಠದ ಕಿರಿಯ ಶ್ರೀಗಳಾದ ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ದಿನಾಂಕ 6ರಂದು ಬೆಳಗ್ಗೆ 8ಕ್ಕೆ ವಾರಣಾಸಿಯ ಶ್ರೀ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಲಿದೆ. ದಿನಾಂಕ 6ರಂದು ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಕಡೂರು ಯಳನಾಡು ಸಂಸ್ಥಾನ ಮಠ ಶ್ರೀ ಜ್ಞಾನ ಪ್ರಭು ಸಿದ್ದರಾಮ ಶ್ರೀ ಸಮ್ಮುಖದಲ್ಲಿ ಜರುಗುವ ಸಮಾರಂಭದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅಮೃತ ಭವನ ಉದ್ಘಾಟನೆಯನ್ನು ಭೈರತಿ ಬಸವರಾಜ್, ಅಮೃತಸಭಾ ಭವನವನ್ನು ವಸತಿ ಸಚಿವ ವಿ. ಸೋಮಣ್ಣ ಉದ್ಘಾಟಿಸಲಿದ್ದಾರೆ.

ಶಾಸಕ ಮಾಡಾಳು ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಸನ್ಮಾನಿಸಲಾಗುವುದು. ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೊಲ್ಲಿಪಾಕಿ ಕ್ಷೇತ್ರ ದರ್ಶನ ಬಿಡುಗಡೆ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಉಮಾಮಹೇಶ್ವರ ಸಮುದಾಯದ ಭವನ ಉದ್ಘಾಟನೆ, ಸಂಸದ ಬಿ.ವೈ. ರಾಘವೇಂದ್ರ ಅಮೃತ ಮಹೋತ್ಸವ ಕೊಠಡಿಗಳ ಉದ್ಘಾಟನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಬೆಳ್ಳಿ ಪ್ರಕಾಶ್, ಡಿ.ಎಸ್. ಸುರೇಶ್, ಅರುಣ್ ಕುಮಾರ್, ಆಯನೂರು ಮಂಜುನಾಥ್ ಮತ್ತಿತರರು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ದೇವರಮನೆ ಶಿವಕುಮಾರ್, ಎ.ಎಸ್. ವೀರಣ್ಣ, ಮಾವಿನಹೊಳೆ ಪ್ರಕಾಶ್, ಕೆ.ಎಂ. ಗಿರೀಶ್, ಜವಳಿ ಮಂಜುನಾಥ್, ಜವಳಿ ಮಹೇಶ್ ಕೊಟ್ರೇಶ್ ಇದ್ದರು.

# ಪ್ರಿನ್ಸ್ ವಿನಾಯಕ ಗ್ರೂಪ್‌ನಿಂದ ಗಣೇಶೋತ್ಸವ



ದಾವಣಗೆರೆ, ಸೆ. 2 - ಪ್ರಿನ್ಸ್ ವಿನಾಯಕ ಗ್ರೂಪ್ ನಿಂದ 14 ನೇ ವರ್ಷದ ಗಣೇಶೋತ್ಸವವನ್ನು ನಗರದ ಪಿಜೆ ಬಡಾವಣೆಯ 5 ನೇ ಕ್ರಾಸ್ ನಲ್ಲಿ ದಿನೇಶ್ ಕೆ. ಶೆಟ್ಟಿ ಅವರ ಮನೆಯ ಹತ್ತಿರ ಆಚರಿಸಲಾಯಿತು.

ಪ್ರತಿಷ್ಠಿತ ಕೊಲ್ಲಾಪುರದಿಂದ ತರಿಸಿರುವ 7 ಅಡಿ ಎತ್ತರದ ಗಣೇಶ ಮೂರ್ತಿ ಯನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಭೇಟಿ ನೀಡಿ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಪ್ರಿನ್ಸ್ ಗಾಯಕ ಗ್ರೂಪ್ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಸದಸ್ಯರಾದ ನಿಖಿತ್ ಶೆಟ್ಟಿ, ನಿದೀಶ್ ಶೆಟ್ಟಿ, ಚೇತನ್ ಕುಮಾರ್, ವಿನಯ್ ಪವನ್ (ಪಾಂಡು), ವಿಜಯಕುಮಾರ್ ಜೈನ್, ಪ್ರಭು ಕಾಂತಿಲಾಲ್, ಕೃಷ್ಣ (ಕಿಟ್ಟಿ), ರಿಷಬ್, ಪ್ರಶಾಂತ್, ಎಸ್.ಮಲ್ಲಿಕಾರ್ಜುನ, ರೋಹಿತ್, ರೋನಿತ್, ಆಕಾಶ್, ನಂದ ಕಾಫಿ ನ್ಯೂ ಡೇ ಮಂಜು, ಪರಶುರಾಮ್, ಶ್ರೀಕಾಂತ್, ವೆಂಕಟೇಶ್ ಮತ್ತಿತರರು ಹಾಜರಿದ್ದರು.

## ಮಹಾಂತ ರುದ್ರ ಶ್ರೀಗಳಿಗೆ ಉಸ್ತುವಾರಿ

**(3ನೇ ಪುಟದಿಂದ)** ಹೆಬ್ಬಾಳ್‌ನಲ್ಲಿರುವ ಮುರುಘಾ ಮಠದ ಶಾಖಾ ಮಠದ ಶ್ರೀ ಮಹಾಂತ ರುದ್ರ ಸ್ವಾಮೀಜಿಗಳಿಗೆ ವಹಿಸಲಾಗಿದೆ.

ಮಹಾಂತ ಸ್ವಾಮೀಜಿ ಅವರು, ಮುರುಘಾ ಮಠದ ಶಾಖಾ ಮಠಗಳಲ್ಲೇ ಹಿರಿಯ ಸ್ವಾಮೀಜಿಯಾಗಿದ್ದಾರೆ.

# ಮಹಿಳೆಯರಿಗೆ ಆದರ್ಶರಾದ ಪ್ರೊ. ವಿಮಲಾದಾಸ್



## ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪ್ರೊ. ವೃಷಭೇಂದ್ರಪ್ಪ ಮೆಚ್ಚುಗೆ

ದಾವಣಗೆರೆ, ಸೆ.2- ವೃತ್ತಿಯಲ್ಲಿ ಆದರ್ಶ ಶಿಕ್ಷಕಿಯಾಗಿ, ಮಹಿಳೆಯರ ದನಿಯಾಗಿ ಕೆಲಸ ಮಾಡುವ ಮೂಲಕ ಪ್ರೊ. ವಿಮಲಾದಾಸ್ ಅವರು ಪ್ರಸ್ತುತ ಮಹಿಳೆಯರಿಗೆ ಆದರ್ಶರಾಗಿದ್ದಾರೆ ಎಂದು ಪ್ರೊ. ವೃಷಭೇಂದ್ರಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಜಾಗೃತ ಮಹಿಳಾ ಸಂಘದ ಕಚೇರಿಯಲ್ಲಿ ಇಂದು ಹಮ್ಮಿಕೊಂಡಿದ್ದ ಎವಿಕೆ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ವಿಮಲಾದಾಸ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

1970 ರ ದಶಕದಲ್ಲಿ ನಗರದಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಯಾವುದೇ ವಿದ್ಯಾ ಕೇಂದ್ರಗಳು ಹಾಗೂ ವಸತಿ ನಿಲಯಗಳು ಇರಲಿಲ್ಲ. ಇಂತಹ ಸಂದರ್ಭದಲ್ಲಿ ಬಾಪೂಜಿ ವಿದ್ಯಾಸಂಸ್ಥೆಯು ಬಾಲಕಿಯರಿಗೆ ಅನುಕೂಲ ಮಾಡಿಕೊಡಲು ಮುಂದಾದಾಗ ಸಂಸ್ಥೆಯ ನಾಯಕತ್ವವನ್ನು ವಹಿಸಿಕೊಂಡು ಯಶಸ್ವಿಯಾಗಿ ಮುನ್ನಡೆಸಿದ್ದರಿಂದ ಭದ್ರ ಬುನಾದಿ ಸಿಕ್ಕಿತು. ಇಂದು ಬಾಪೂಜಿ ಸಂಸ್ಥೆಯ ಮೂಲಕ ನಗರದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ದಾರಿ ದೀಪವಾಗಿದ್ದಾರೆ ಎಂದು ಹೇಳಿದರು.

ಎವಿಕೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ.ಪಿ. ಕುಮಾರ್ ಮಾತನಾಡಿ, ಪ್ರೊ. ವಿಮಲದಾಸ್ ಒಂದು ಶಕ್ತಿಯಾಗಿದ್ದರು. ಒಬ್ಬ ಅಧ್ಯಾಪಕ ಹೇಗಿರಬೇಕು ಹಾಗೂ ವೃತ್ತಿನಿಷ್ಠೆ, ಸಮಯ ಪ್ರಜ್ಞೆ ಬಗ್ಗೆ ಪಾಠ ಕಲಿಸಿದರು. ಸಹದ್ಯೋಗಿ ಮಿತ್ರರನ್ನು ತಿದ್ದುವ ಪರಿಪಾಠ ಹೊಂದಿದ್ದರು ಎಂದು ನೆನಪು ಮಾಡಿಕೊಂಡರು.

ವಿಮಲದಾಸ್ ಅವರು ಹಾಕಿಕೊಟ್ಟ ಬುನಾದಿ ಭದ್ರವಾಗಿದ್ದು, ಅಂದು ಅವರು ಕಟ್ಟಿದ್ದ ಎವಿಕೆ ಕಾಲೇಜು ಇಂದು 50 ವರ್ಷ ದಾಟಿದೆ. ಇಂದು ಹೆಣ್ಣುಮಕ್ಕಳಿಗೆ ಸಿಗುತ್ತಿರುವ ಶಿಕ್ಷಣಕ್ಕೆ ಅವರೇ ಕಾರಣ. ಹೆಣ್ಣುಮಕ್ಕಳಿಗೆ ಆಗುತ್ತಿದ್ದ ದೌರ್ಜನ್ಯ, ಕಿರುಕುಳದ ಬಗ್ಗೆ ದನಿ ಎತ್ತಿದವರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಎವಿಕೆ ಕಾಲೇಜಿನಲ್ಲಿ ಉತ್ತಮ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪದವಿಯ ಜೊತೆ ಜೀವನ ಮೌಲ್ಯ ನೀಡಿ ಜೀವನಕ್ಕೆ ಬೇಕಾದ ಶಿಕ್ಷಣ ನೀಡುತ್ತಿದ್ದೇವೆ ಎಂದರು.

ಪ್ರೊ. ಶಕುಂತಲಾ ಗುರುಸಿದ್ದಯ್ಯ ಮಾತನಾಡಿ, ವಿಮಲಾ ದಾಸ್ ಅವರು ಬದುಕಿದ್ದ 90 ವರ್ಷಗಳ ಕಾಲ ಸಮಾಜದಲ್ಲಿ ಹೇಗೆ ಬಾಳಬೇಕೆಂದು ತೋರಿಸಿಕೊಟ್ಟಿದ್ದಾರೆ. ಜಾಗೃತಿ ಮಹಿಳಾ ಸಂಘದ ಮೂಲಕ ಸಮಾಜದಲ್ಲಿ ಅನ್ಯಾಯಕ್ಕೊಳ್ಳಗಾದ ಮಹಿಳೆಯರಿಗೆ ನ್ಯಾಯ ಒದಗಿಸುವ ಕೆಲಸ ಮಾಡಿದ್ದರು ಎಂದು ನೆನಪಿಸಿಕೊಂಡರು.

ಸಂಘದ ಕಾರ್ಯದರ್ಶಿ ಶ್ರೀಮತಿ ಅಮೀನಾ ಬಾನು ಮಾತನಾಡಿ, ಜೀವನದಲ್ಲಿ ದೇವರು ನಮಗೆ ಕೊಟ್ಟಿದ್ದನ್ನು ಸಮಾಜದ ಅಭಿವೃದ್ಧಿಗೆ ಒಂದು ಪಾಲನ್ನು ನೀಡಬೇಕು ಎಂದು ವಿಮಲಾ ದಾಸ್ ಹೇಳುತ್ತಿದ್ದರು. ಅವರು ಯಾವುದೇ ರಾಜಕೀಯ ಸ್ಥಾನಮಾನಕ್ಕಾಗಿ, ಜನಪ್ರಿಯತೆಗಾಗಿ ಸಮಾಜ ಸೇವೆಯನ್ನು ಮಾಡಲಿಲ್ಲ. ಅವರಿಗೆ ಕಸೂತಿ ಕೆಲಸದಿಂದ ಹಿಡಿದು ಅಡುಗೆವರೆಗೂ ಎಲ್ಲಾ ಕ್ಷೇತ್ರದ ಪರಿಣಿತಿಯನ್ನು ಪಡೆದಿದ್ದ ಅವರು ಇಂದು ಲಕ್ಷದಲ್ಲಿ ಒಬ್ಬ ಮಹಿಳೆಯಾಗಿ ನಮ್ಮೆಲ್ಲರಿಗೂ ದಾರಿದೀಪವಾಗಿದ್ದಾರೆ ಎಂದರು.

ಅಕ್ಕಮಹಾದೇವಿ ಸಂಘದ ಉಪಾಧ್ಯಕ್ಷರಾದ ನೀಲಗುಂದ ಜಯಮ್ಮ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಮಾ ವೀರಭದ್ರಪ್ಪ, ಡಾ.ಕೃತಿ, ಸಂಘದ ಸದಸ್ಯರಾದ ಆಶಾ ಕಲ್ಲನಗೌಡ್ರು, ಸತ್ಯಭಾಮ ಮಂಜುನಾಥ್, ಗೀತಾ ಮಾರುತೇಶ್, ಸಿಬ್ಬಂದಿಗಳಾದ ಮಮತಾ, ಹೇಮಲತಾ, ಸುಮಾ, ಎಸ್. ಕುಮಾರ್, ನಿಶ್ಚಿತಾ ಸೇರಿದಂತೆ ಇತರರು ಇದ್ದರು.

# ನಗರದಲ್ಲಿ ಇಂದು ಶಿಕ್ಷಕರಿಗೆ ಮೌಲ್ಯ ಶಿಕ್ಷಣ ತರಬೇತಿ

ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪೌಢಶಾಲೆ ಹಾಗೂ ಜ್ಞಾನಜ್ಯೋತಿ ವನಿತಾ ಶಿಕ್ಷಕಿಯರ ವೇದಿಕೆ, ವನಿತಾ ಸಮಾಜ ಇವರ ಸಂಯುಕ್ತಾಶ್ರಯದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಬಿ.ಆರ್. ಶಾಂತಕುಮಾರಿ ಸ್ಮರಣಾರ್ಥ ಈಶ್ವರಮ್ಮ ಶಾಲಾ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಶಿಕ್ಷಕರಿಗೆ ಮೌಲ್ಯ ಶಿಕ್ಷಣ ತರಬೇತಿ ಕಾರ್ಯಾಗಾರ ನಡೆಯಲಿದೆ. ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ ಕಾರ್ಯಾಗಾರವನ್ನು ಉದ್ಘಾಟಿಸುವರು.

ಈಶ್ವರಮ್ಮ ಶಾಲಾ ಆಡಳಿತ ಮಂಡಳಿ ಅಧ್ಯಕ್ಷೆ ಸುಜಾತ ಕೆ.ಆರ್.ಕೃಷ್ಣ, ಈಶ್ವರಮ್ಮ ಟ್ರಸ್ಟ್ ಕಾರ್ಯದರ್ಶಿ ಜಿ.ಅರ್. ವಿಜಯಾನಂದ್, ವನಿತಾ ಶಿಕ್ಷಕಿಯರ ವೇದಿಕೆ ಅಧ್ಯಕ್ಷೆ ಜಿ.ಎಸ್. ಶಶಿರೇಖಾ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3.30 ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಹಿರಿಯ ಪತ್ರಕರ್ತ ಸದಾನಂದ ಹೆಗಡೆ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷೆ ಎ.ಆರ್. ಉಷಾ ರಂಗನಾಥ್ ಪ್ರಮಾಣ ಪತ್ರ ವಿತರಿಸುವರು. ವನಿತಾ ಶಿಕ್ಷಕಿಯರ ವೇದಿಕೆ ಕಾರ್ಯದರ್ಶಿ ಮಲ್ಲಮ್ಮ ನಾಗರಾಜ್, ಈಶ್ವರಮ್ಮ ಶಾಲೆ ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್, ವನಿತಾ ಶಿಕ್ಷಕಿಯರ ವೇದಿಕೆ ಖಜಾಂಚಿ ಆರ್. ವಾಗ್ದೇವಿ ಭಾಗವಹಿಸಲಿದ್ದಾರೆ.

# ನಾಡಿದ್ದು ದ್ವಾದಶ ಪೀಠಾರೋಹಣ ಉತ್ಸವ

**(6ನೇ ಪುಟದಿಂದ)** ದಿನಾಂಕ 6ರಂದು ಸಂಜೆ 6ಕ್ಕೆ ನಡೆಯುವ ಕಾರ್ಯಕ್ರಮವನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಬಿ.ಪಿ. ಹರೀಶ್, ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಸೇರಿದಂತೆ ಇತರೆ ಗಣ್ಯರು ಆಗಮಿಸಲಿದ್ದಾರೆ.

ದಿನಾಂಕ 7ರ ಸಂಜೆ 6ಕ್ಕೆ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಮಠದ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಶೀ ಪೀಠದ ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಬಿ.ಸಿ. ಉಮಾಪತಿ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎ.ಎನ್. ಮುರುಗೇಶ್ ಇತರರು ಆಗಮಿಸಲಿದ್ದಾರೆ.

ದಿನಾಂಕ 7ರ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಓಂಕಾರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಭಕ್ತರಿಗೆ ಸಾಮೂಹಿಕವಾಗಿ ಶಿವದೀಕ್ಷಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ವ್ಯವಸ್ಥಾಪಕ ಕೆ.ಬನ್ನಯ್ಯ (9986922077) ಅವರನ್ನು ಸಂಪರ್ಕಿಸಬಹುದು.

ದಿನಾಂಕ 7ರಂದು ಬೆಳಿಗ್ಗೆ 11ಕ್ಕೆ ಕಾಶೀ ಮಹಾಪೀಠದ ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಭಗವತ್ಪಾದರ ಪುರಪ್ರವೇಶ ಮಾಡಲಿದ್ದು, ಸುಮಾರು 100ಕ್ಕೂ ಹೆಚ್ಚು ಬೈಕ್‌ಗಳ ರ‍್ಯಾಲಿ ಮುಖಾಂತರ ಸ್ವಾಗತಿಸಲಾಗುವುದು.

ಶಾಮನೂರು ಬೈಪಾಸ್‌ನಿಂದ ಕಾರ್ಯಕ್ರಮ ನಡೆಯುವ ಸ್ಥಳದವರೆಗೆ ನಡೆಯಲಿದೆ. ಇದೇ ವೇಳೆ ಬೆಳ್ಳಿ ಅಡ್ಡಪಲ್ಲಕ್ಕಿ ಉತ್ಸವ ಪ್ರಮುಖ ರಸ್ತೆಗಳಲ್ಲಿ ಸಾಗಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಾ.ಮ. ಬಸವರಾಜಯ್ಯ, ದೇವರಮನೆ ಶಿವಕುಮಾರ್, ಎನ್.ಎ. ಮುರುಗೇಶ್, ಡಿ.ಎಂ. ಹಾಲಸ್ವಾಮಿ, ಕೆ.ಎಂ. ಚನ್ನಬಸಯ್ಯ, ಆವರಗೊಳ್ಳ ವಾಗೀಶಯ್ಯ, ಪಿ.ಜೆ. ರಾಜಶೇಖರ್, ಎ.ಎಂ. ಕೊಟ್ರೇಶ್, ಕೆ.ಎಂ. ಪರಮೇಶ್ವರಯ್ಯ, ಬನ್ನಯ್ಯ ಸ್ವಾಮಿ, ಶಿವಕುಮಾರ್ ಡಿ. ಶೆಟ್ಟರ್, ದ್ರಾಕ್ಷಾಯಣಮ್ಮ, ರಾಜೇಶ್ವರಿ ವಸುಂಧರಮ್ಮ ಸೇರಿದಂತೆ ಇತರರು ಇದ್ದರು.

# ಕೋದಂಡರಾಮ ದೇವಾಲಯದಲ್ಲಿ ರಾಮಾಯಣದ ಲೇಸರ್‌ಶೋ

ದಾವಣಗೆರೆ, ಸೆ. 2- ವಿನಾಯಕ ಮಹೋತ್ಸವದ ಅಂಗವಾಗಿ ನಗರದ ಸ್ವಸ್ತಿಕ್ ಗ್ರೂಪ್ ವತಿಯಿಂದ ಮಂಡಿಪೇಟೆಯ ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಇದೇ ದಿನಾಂಕ 9ರ ಶುಕ್ರವಾರದವರೆಗೆ ಪ್ರತಿದಿನ ಸಂಜೆ 6ರಿಂದ 9ರವರೆಗೆ ರಾಮಾಯಣದ ಕುರಿತು ಹಾಗೂ ನಟ ದಿ. ಪುನೀತ್ ರಾಜ್‌ಕುಮಾರ್ ಸಾಧನೆಗಳ ಕುರಿತು ಲೇಸರ್ ಶೋ ಪ್ರದರ್ಶನ ಆಯೋಜಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಸ್ವಸ್ತಿಕ್ ಗ್ರೂಪ್‌ನ ಎ.ಎಂ. ಕೃಷ್ಣ ಅವರು, ಹನುಮಂತನ ಸಮುದ್ರ ಉಲ್ಲಂಘನ, ಲಂಕಿಣಿಯ ಹರಣ, ಸೀತೆಗೆ ಮುದ್ರೆ ಉಂಗುರ ಪ್ರದಾನ, ಲಂಕಾ ದಹನ, ರಾಮನಿಗೆ ಚೂಡಾಮಣಿ ಸಮರ್ಪಣೆಯ ದೃಶ್ಯಗಳನ್ನು ಲೇಸರ್ ಮೂಲಕ ಬಿಂಬಿಸಲಾಗುವುದು ಎಂದರು.

ಪ್ರವೀಣ್ ಅವರು ಮಾತನಾಡಿ, ಈ ಬಾರಿ ಡಬಲ್ ಪ್ರೊಜೆಕ್ಟರ್ ಮೂಲಕ ಲೇಸರ್ ಶೋ ಪ್ರದರ್ಶಿಸಲಾಗುತ್ತಿದೆ. ಸರ್ಕಾರಿ ಶಾಲೆಗಳು ಮುಂಚಿತವಾಗಿ ತಿಳಿಸಿದಲ್ಲಿ, ಶಾಲಾ ಮಕ್ಕಳಿಗೆ ಬೆಳಗಿನ ವೇಳೆಯೇ ಲೇಸರ್ ಶೋ ಪ್ರದರ್ಶನ ಆಯೋಜಿಸಲಾಗುವುದು. ಇದಕ್ಕಾಗಿ ಮೊ : 98867 23634, 98444 06161 ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ತಿಲಕ್, ಮಹಾಂತೇಶ್, ರವಿ, ಎ.ಎಂ. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

# ಸೆ.5ರ ವರೆಗೆ ಶರಣರು ಪೊಲೀಸ್ ವಶಕ್ಕೆ

**(3ನೇ ಪುಟದಿಂದ)** ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಖಾಸಗಿ ದೂರು ಪ್ರಕರಣದಲ್ಲಿ ಬೆಂಗಳೂರು ಮೆಟ್ರೋಪಾಲಿಟನ್ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹೊರಡಿಸಿದೆ. ಎರಡು ವರ್ಷಗಳ ಹಿಂದೆ ತಿಪ್ಪಶೆಟ್ಟಿ ಮಠದ ಆಸ್ತಿ ಮಾರಾಟಕ್ಕೆ ಸಂಬಂಧಿಸಿದಂತೆ ಪಂಚಾಕ್ಷರಯ್ಯ ಎಂಬುವವರು ದೂರು ದಾಖಲಿಸಿದ್ದರು. ಈ ಪ್ರಕರಣದ ವಿಚಾರಣೆಗೆ ಶ್ರೀಗಳು ಹಾಜರಾಗಿಲ್ಲ ಎಂದು ವಾರಂಟ್ ಹೊರಡಿಸಲಾಗಿದೆ.

## ನಗರದ ಸೊಗಸು ಮತ್ತಷ್ಟು ಹೆಚ್ಚಾಗಲಿ...



ಮಾನ್ಯರೇ,

ಕಸದ ಗಾಡಿಗಳು ಒಂದು ದಿನ ಬರದಿದ್ದ ಸಂದರ್ಭದಲ್ಲಿ ಸಾರ್ವಜನಿಕರು ಕಸವನ್ನು ಶೇಖರಿಸಿಟ್ಟು ಮರು ದಿನದಂದು ಬರುವ ಕಸದ ಗಾಡಿಗೆ ಹಾಕಬೇಕು. ಕಸದ ಗಾಡಿಗಳ ಸಿಬ್ಬಂದಿ ವರ್ಗ ರಜೆ ಮಾಡುವ ಸಂದರ್ಭ ಇದ್ದಾಗ ಹಿಂದಿನ ದಿನವೇ ಧ್ವನಿವರ್ಧಕದ ಮೂಲಕ ಗೈರುಹಾಜರಿಯ ಬಗ್ಗೆ ತಿಳಿಸುವಂತಾಗಬೇಕು.

**ಓದುಗರ ಪತ್ರ**

ದಿನದಿಂದ ದಿನಕ್ಕೆ ಎಸ್.ಪಿ.ಎಸ್. ನಗರದ ರಿಂಗ್ ರಸ್ತೆಯು ತನ್ನ ಅಂದವನ್ನು ಹೆಚ್ಚಿಸಿಕೊಳ್ಳುತ್ತಿದೆ. ದ್ವಿಮುಖ ರಸ್ತೆಗಳ ನಡುವೆ ಇರುವ ಖಾಲಿ ಜಾಗದಲ್ಲಿ ಮರವಾಗುವ ಗಿಡಗಳನ್ನು ನೆಡಬೇಕು. ಇದರಿಂದಾಗಿ ಕಾಂಕ್ರೀಟ್ ರಸ್ತೆಗಳ ತಾಪವು ಕಡಿಮೆ ಮಾಡಲು ಅನುಕೂಲವಾಗಲಿದೆ. ಈ ಜಾಗದಲ್ಲಿ ಸಾರ್ವಜನಿಕರು ತ್ಯಾಜ್ಯಗಳನ್ನು ಎಸೆಯದ ಹಾಗೇ ಮುನ್ನೆಚ್ಚರಿಕೆಗಳನ್ನು ತಿಳಿಸುವ ಹಾಗೇ ಫಲಕಗಳನ್ನು ಹಾಕಬೇಕು. ಇದರಿಂದಾಗಿ ಎಚ್ಚರಿಕೆಯ ಪ್ರಕಟಣೆ ಮೂಲಕ ಈ ನಗರದ ಸೊಗಸು ಮತ್ತಷ್ಟು ಹೆಚ್ಚಾಗಲು ಸಹಕಾರಿಯಾಗುವುದು.

- ವೈ.ವಿ. ಭಟ್, ವಕೀಲರು, ದಾವಣಗೆರೆ.

# ಮುರುಘಾ ಶರಣರ ಬಂಧನ ಖಂಡಿಸಿ ಪ್ರತಿಭಟನೆ

**(3ನೇ ಪುಟದಿಂದ)** ಅವರೇ ಸ್ವಯಂ ಶರಣಾಗತಿಯಾಗಿದ್ದಾರೆ ಎಂದರು.

ಐತಿಹಾಸಿಕ ಮುರುಘಾಮಠ ಶ್ರೀಮಂತ ಮಠ. ಅಲ್ಲಿ ಹಣ ಹೊಡೆಯುವ ಉದ್ದೇಶದಿಂದ ಶ್ರೀಗಳಿಗೆ ಕಪ್ಪು ಮಸಿ ಬಳಿಯುವ ಹುನ್ನಾರ ನಡೆದಿದೆ ಎಂದ ಅವರು, ಮುಖ್ಯಮಂತ್ರಿಗಳು ಶೀಘ್ರವೇ ಶ್ರೀಗಳನ್ನು ಬಂಧನ ಮುಕ್ತಗೊಳಿಸಬೇಕು ಎಂದರು. ಶ್ರೀಗಳ ಆರೋಪದಿಂದ ಮುಕ್ತರಾಗುವವರಿಗೆ ಅವರಿಗೆ ಎಲ್ಲರೂ ಬೆಂಬಲ ನೀಡಬೇಕಿದೆ ಎಂದರು.

ಶ್ರೀನಿವಾಸ ದಾಸಕರಿಯಪ್ಪ ಮಾತನಾಡಿ, ಶ್ರೀಗಳ ಬಂಧನವನ್ನು ರಾಜ್ಯವಷ್ಟೇ ಅಲ್ಲ, ಇಡೀ ವಿಶ್ವವೇ ಖಂಡಿಸುತ್ತಿದೆ. ನಿಜವಾದ ಅಪರಾಧಿ ಯಾರು ಎಂಬುದು ಶೀಘ್ರವೇ ತಿಳಿಯಲಿದೆ. ಶ್ರೀಗಳ ಬೆಂಬಲಕ್ಕೆ ನಾವೆಲ್ಲರೂ ಇರಬೇಕಿದೆ ಎಂದರು.

ಪಾಲಿಕೆ ವಿಪಕ್ಷ ನಾಯಕ ಮಂಜುನಾಥ್ ಗಡಿಗುಡಾಳ್ ಮಾತನಾಡುತ್ತಾ, ಇದೇ ಕೇವಲ ಶ್ರೀಗಳ ಮೇಲಿನ ಆಪಾದನೆಯಲ್ಲ. ಬದಲಿಗೆ ಅವರ ಶಿಷ್ಯಂದಿರಾದ ನಮ್ಮ ಮೇಲೆ ಬಂದಿರುವ ಅಪಾದನೆ.. ಶ್ರೀಗಳ ಶೀಘ್ರ ಆರೋಪ ಮುಕ್ತರಾಗುತ್ತಾರೆ. ವಿದ್ಯೆ, ಅನ್ನದಾಸೋಹದಂತಹ ಸೇವಾ ಕಾರ್ಯಗಳೇ ಅವರಿಗೆ ಗೆಲುವು ತಂದು ಕೊಡುತ್ತವೆ ಎಂದರು.

ಪ್ರತಿಭಟನಾ ಸಂದರ್ಭದಲ್ಲಿ ಎಂ. ಜಯಕುಮಾರ್, ಅಗಡಿ ಮಹಾಂತೇಶ್, ಅಂದನೂರು ಮುಪ್ಪಣ್ಣ, ಬಿ.ಹೆಚ್. ವೀರಭದ್ರಪ್ಪ, ಅಂದನೂರು ಮುಪ್ಪಣ್ಣ, ಮಹದೇವಮ್ಮ, ಟಾರ್ಗೆಟ್ ಅಸ್ಲಾಂ, ಸಿ.ಆರ್. ನಸೀರ್ ಅಹ್ಮದ್, ಬೆಳ್ಳೂಡಿ ಮಂಜುನಾಥ್, ಪಲ್ಲಾಗಟ್ಟೆ ಶಿವಾನಂದಪ್ಪ, ಟಿಂಕರ್ ಮಂಜಣ್ಣ, ಕೆ.ಎಸ್. ಗೋವಿಂದರಾಜ್, ಕುಂಟೋಜಿ ಚನ್ನಪ್ಪ, ಎಸ್. ಓಂಕಾರಪ್ಪ, ಬಾಳೆಕಾಯಿ ಮುರುಗೇಶ್, ಜಂಬಗಿ ರಾಧೇಶ್, ಎನ್. ನೀಲಗಿರಿಯಪ್ಪ, ಡೋಲಿ ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

## ಮುರುಘಾ ಶರಣರ ಪೀಠ ತ್ಯಾಗಕ್ಕೆ ಒತ್ತಾಯ

ದಾವಣಗೆರೆ, ಸೆ. 2 - ಪೋಕ್ಸೋ ಪ್ರಕರಣ ಎದುರಿಸುತ್ತಿರುವ ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರು ಪೀಠತ್ಯಾಗ ಮಾಡಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಟಿ. ರವಿಕುಮಾರ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಆರೋಪದ ಗಂಭೀರತೆಯನ್ನೂ ಲೆಕ್ಕಿಸದೇ ಕೆಲ ದಲಿತ ಸ್ವಾಮೀಜಿಗಳು ಶರಣರ ಪರ ಹೋರಾಟ ನಡೆಸುತ್ತಿರುವುದು ವಿಪರ್ಯಾಸ ಎಂದು ಹೇಳಿದ್ದಾರೆ.

ಆರೋಪಿಗಳ ಸಮರ್ಥನೆ ನೊಂದ ಅಪ್ರಾಪ್ತೆಯರ ನೈತಿಕ ಸ್ಥೈರ್ಯ ಕುಸಿಯುವಂತೆ ಮಾಡುತ್ತದೆ. ಇಂಥವರ ವಿರುದ್ಧ ಸಾಕ್ಷಿ ನಾಶ ಹಾಗೂ ಆರೋಪಿಗಳ ರಕ್ಷಣೆ ಆರೋಪದ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ಸಂತ್ರಸ್ತ ಬಾಲಕಿಯರಿಗೆ ಸೂಕ್ತ ರಕ್ಷಣೆ, ಒಂದು ಕೋಟಿ ರೂ. ಪರಿಹಾರ ಹಾಗೂ ಸರ್ಕಾರಿ ನೌಕರಿ ಒದಗಿಸಬೇಕೆಂದು ರವಿಕುಮಾರ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಯ ಮುಖಂಡರಾದ ಹೆಚ್. ಮಲ್ಲಿಕಾರ್ಜುನ ವಂದಾಲಿ, ರಾಘವೇಂದ್ರ ಡಿ.ಕಡೇಮನಿ, ಹುಚ್ಚವ್ವನಹಳ್ಳಿ ಹನುಮಂತ, ಎ. ತಿಪ್ಪೇಸ್ವಾಮಿ, ಕೆಂಚಮ್ಮನಹಳ್ಳಿ ರುದ್ರೇಶ್, ನಾಗರಾಜ್ ಹಾಲುವರ್ತಿ, ತಿಪ್ಪೇಸ್ವಾಮಿ ಕಂದನಕೋವಿ, ಗುಡಾಳು ಮಂಜುನಾಥ್, ಬಿ. ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಉದ್ಯೋಗಿಗೆ 60 ರಜೆ

**(3ನೇ ಪುಟದಿಂದ)** ಇಲಾಖೆ, ರಜೆಯು ಎಲ್ಲಾ ಮಹಿಳಾ ಉದ್ಯೋಗಿಗಳಿಗೆ ಅನ್ವಯವಾಗಲಿದೆ ಎಂದು ಹೇಳಿದೆ. ಹೆರಿಗೆಯಾದ ತಕ್ಷಣವೇ ಮಗು ಸಾವನ್ನಪ್ಪಿದಾಗ ಆಗುವ ಮಾನಸಿಕ ನೋವನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

## ಮಹಾನಗರ ಪಾಲಿಕೆ ನೌಕರರಿಂದ ಅನ್ನ ಸಂತರ್ಪಣೆ



ದಾವಣಗೆರೆ, ಸೆ 2 - ಮಹಾನಗರ ಪಾಲಿಕೆ ನೌಕರರ ಸಂಘದ ವತಿಯಿಂದ ಶ್ರೀ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಇದರ ಅಂಗವಾಗಿ ಇಂದು ಅನ್ನ ಸಂತರ್ಪಣೆ ನಡೆಸಲಾಯಿತು. ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಅಧ್ಯಕ್ಷತೆ ವಹಿಸಿದ್ದರು. ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಅವರು ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಾಲಿಕೆ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್ ಮತ್ತು ಇತರರು ಉಪಸ್ಥಿತರಿದ್ದರು.

## ಇಂದು ಗೌಡ ಸಾರಸ್ವತ ಸಮಾಜದಿಂದ ಗಣೇಶೋತ್ಸವ

ನಗರದಲ್ಲಿ ಗೌಡ ಸಾರಸ್ವತ ಸಮಾಜದ 47ನೇ ವರ್ಷದ 5 ದಿನಗಳ ಶ್ರೀ ಗಣೇಶೋತ್ಸವವನ್ನು ಆಚರಿಸಲಾಗುತ್ತಿದೆ ಎಂದು ಸಮಾಜದ ಅಧ್ಯಕ್ಷರಾದ ಶ್ರೀಮತಿ ಅಮಿತಾ ಡಾ. ವೇಣುಗೋಪಾಲ್ ಪೈ ತಿಳಿಸಿದ್ದಾರೆ. ಪ್ರತಿ ದಿನ ಸಂಜೆ ಸಾಮೂಹಿಕ ಭಜನೆ ಜೊತೆಯಲ್ಲಿ ಮಕ್ಕಳಿಗೆ, ಪುರುಷರಿಗೆ, ಮಹಿಳೆಯರಿಗೆ ಆಟೋಟ ಸ್ಪರ್ಧೆ, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ಛದ್ಮವೇಷ ಸ್ಪರ್ಧೆ ನಡೆಯಲಿದ್ದು, ಇಂದು ಸಂಜೆ ಸರ್ವ ಸದಸ್ಯರ ಮಹಾಸಭೆ ನಡೆಯಲಿದೆ ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ ಕೆ.ವೆಂಕಟರಮಣ ಭಟ್ ತಿಳಿಸಿದ್ದಾರೆ.

## ಸಮುದಾಯ ಆರೋಗ್ಯ ಕೇಂದ್ರಕ್ಕೆ ಜಿಲ್ಲಾಧಿಕಾರಿ, ತಹಶೀಲ್ದಾರ್ ಭೇಟಿ



**ಮಲೇಬೆನ್ನೂರು**

ಮಲೇಬೆನ್ನೂರು, ಸೆ.2- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶುಕ್ರವಾರ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಅವರು ಧಿಡೀರ್ ಭೇಟಿ ನೀಡಿ, ಆಸ್ಪತ್ರೆಯ ವ್ಯವಸ್ಥೆ ಬಗ್ಗೆ ಪರಿಶೀಲಿಸಿದರು. ಈ ವೇಳೆ ವಿವಿಧ ಕಾಮಗಾರಿ ವೀಕ್ಷಿಸಿದರು. ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್, ಉಪ ತಹಶೀಲ್ದಾರ್ ಆರ್. ರವಿ, ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ, ಡಾ.ನಿಸಾರ್ ಮತ್ತಿತರರು ಈ ವೇಳೆ ಇದ್ದರು.

## ಮಾರ್ಕಂಡೇಶ್ವರ ಸಹಕಾರಿಯಲ್ಲಿ ಧ್ವಜಾರೋಹಣ

ರಾಣೆಬೆನ್ನೂರು,ಸೆ.2- ಶ್ರೀ ಗುರು ಮಾರ್ಕಂಡೇಶ್ವರ ಸೌಹಾರ್ದ ಸಹಕಾರಿ ನಿಯಮಿತದಲ್ಲಿ 75ನೆಯ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಸ್ವಾತಂತ್ರ್ಯ ಸಿಗುವುದಕ್ಕೆ ಕಾರಣಕರ್ತರಾದ ಎಲ್ಲರಿಗೂ ನಮನ ಸಲ್ಲಿಸಿದರು. ವ್ಯವಸ್ಥಾಪಕ ಪ್ರೇಮನಾಥ ಲದ್ವಾ ನಿರ್ದೇಶಕ ಯಲ್ಲಪ್ಪ ಗುತ್ತಲ ಮಾತನಾಡಿದರು.

# ಅಜ್ಜಂಪುರ ಶೆಟ್ರು ಮುತ್ತಣ್ಣ ನಿವಾಸಕ್ಕೆ ಕೊಪ್ಪಳ ಗವಿಮಠದ ಸ್ವಾಮೀಜಿ



ದಾವಣಗೆರೆ, ಸೆ.2- ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಠದ ಪೀಠಾಧಿಪತಿ ಶ್ರೀ ಅಭಿನವ ಗುರುಸಿದ್ದ ಸ್ವಾಮೀಜಿ ಪೂಜಾ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ನಿನ್ನೆ ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಶ್ರೀ ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ಮೃತ್ಯುಂಜಯ ಮತ್ತು ಶ್ರೀಮತಿ ಮೈತ್ರಾ ದಂಪತಿ ಶ್ರೀಗಳವರನ್ನು ಬರ ಮಾಡಿಕೊಂಡು, ಬೀಳ್ಕೊಟ್ಟರು. ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎ.ಎಸ್. ವಿಜಯಕುಮಾರ್, ಶ್ರೀಮತಿ ವಿಜೇತ ವಿಜಯಕುಮಾರ್, ಶ್ರೀಮತಿ ಸುಧಾ ಅಜ್ಜಂಪುರ ಶೆಟ್ರು ರಾಜಣ್ಣ, ಶರಭೇಶ್ವರ ಬಸವರಾಜ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು - ನಾಳೆ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಇಂದು ಮತ್ತು ನಾಳೆ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಭಾಗವಹಿಸುವವರು ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಸಂಘಟಕರಲ್ಲಿ ವರದಿ ಮಾಡಿಕೊಳ್ಳಬಹುದು. ಇಂದು ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋಬಾಲ್, ಬಾಲ್‌ಬ್ಯಾಡ್ಮಿಂಟನ್, ನೆಟ್‌ಬಾಲ್, ಟೇಬಲ್ ಟೆನ್ನಿಸ್, ಶಟಲ್‌ಬ್ಯಾಡ್ಮಿಂಟನ್, ಫುಟ್ಬಾಲ್ ನಾಳೆ ಹಾಕಿ, ಕುಸ್ತಿ, ಹ್ಯಾಂಡ್‌ಬಾಲ್, ಈಜು ಸ್ಪರ್ಧೆಗಳು ನಡೆಯಲಿವೆ. ವಿವರಕ್ಕೆ ಸಂಪರ್ಕಿಸಿ : 08192-237480.

# ರೈತರಿಗೆ ವಿವಿಧ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ

ದಾವಣಗೆರೆ, ಸೆ.2- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶು ಆಸ್ಪತ್ರೆ ಅವರಣದಲ್ಲಿರುವ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ.

ಇದೇ ದಿನಾಂಕ 5 ರಿಂದ ಇದೇ ದಿನಾಂಕ 13 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ, ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.

ವಿವರಕ್ಕ ಸಂಪರ್ಕಿಸುವ ದೂರವಾಣಿ 08192-233787.


**ಹರಪನಹಳ್ಳಿ ಶ್ರೀ ವೆಂಕಟರಮಣಸ್ವಾಮಿ ಪರಮನೆಂಟ್ ಭಂಡಾರ ನಿಧಿ ಲಿಮಿಟೆಡ್**

**ಹರಪನಹಳ್ಳಿ, ವಿಜಯನಗರ ಜಿಲ್ಲೆ ದೂ. : 08398 280215**

**ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು**

**ಮಾನ್ಯ ಸರ್ವ ಸದಸ್ಯರ ಗಮನಕ್ಕೆ**

ಸಂಸ್ಥೆಯ 31.03.22ಕ್ಕೆ ಮುಗಿದಿರುವ ಕಂಪನಿಯ ವಾರ್ಷಿಕ ವರದಿಯ ಬಗ್ಗೆ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 28.09.2022ರ ಬುಧವಾರ ಮಧ್ಯಾಹ್ನ 2.00 ಗಂಟೆಗೆ ಸರಿಯಾಗಿ ಕಂಪನಿಯ ನೋಂದಾಯಿತ ಕಛೇರಿಯ ಸಭಾ ಭವನದಲ್ಲಿ ಕರೆಯಲಾಗಿದೆ.

**ವಿ.ಸೂ. : ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು ಕಳುಹಿಸಲಾಗಿದ್ದು, ತಲುಪದಿದ್ದವರಿಗೆ ಕಛೇರಿಯಲ್ಲಿ ಭೇಟಿ ಮಾಡಿ ನೋಟಿಸನ್ನು ಪಡೆಯಬಹುದು. ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಭೆಗೆ ಆಗಮಿಸಲು ವಿನಂತಿ.**

**ಸ್ಥಳ : ಹರಪನಹಳ್ಳಿ**
**ದಿನಾಂಕ :"02.09.2022**

**ಡೈರೆಕ್ಟರುಗಳ ಅಪ್ಪಣೆ ಮೇರೆಗೆ,**
**ಸಹಿ/- ಟಿ. ವ್ಯಾಸರಾಜ, ಛೇರ್ಮನ್**

## ನಗರದಲ್ಲಿ ಇಂದಿನಿಂದ 3 ದಿನ ಮದ್ಯ ಮಾರಾಟ ನಿಷೇಧ

ದಾವಣಗೆರೆ, ಸೆ. 2- ಗಣೇಶ ಪ್ರತಿಷ್ಠಾಪನೆ ಮತ್ತು ವಿಸರ್ಜನೆ ಸಂಬಂಧ ಗಣೇಶ ಮೂರ್ತಿಗಳನ್ನು ಮೆರವಣಿಗೆ ಮುಖಾಂತರ ವಿಸರ್ಜನಾ ಸ್ಥಳಗಳಿಗೆ ತೆಗೆದುಕೊಂಡು ಹೋಗಲಿದ್ದು, ಈ ಸಂಧರ್ಭದಲ್ಲಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಅತೀ ಅವಶ್ಯಕವಾಗಿರುತ್ತದೆ ಪ್ರಯುಕ್ತ ಮದ್ಯ ಮಾರಾಟ ಮತ್ತು ಸರಬರಾಜನ್ನು ನಾಡಿದ್ದು ದಿನಾಂಕ 4ರ ಭಾನುವಾರ, 8 ರ ಗುರುವಾರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ನಿಷೇಧಗೊಳಿಸಲು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

## ದೊಡ್ಡಪೇಟೆಯಲ್ಲಿ ಸುಗಮ ಸಂಗೀತ

ದಾವಣಗೆರೆ ನಗರದ ದೊಡ್ಡಪೇಟೆ ವಿನಾಯಕ ದೇವಸ್ಥಾನದಲ್ಲಿ ನಡೆಯುತ್ತಿರುವ ವಿನಾಯಕ ಮಹೋತ್ಸವದಲ್ಲಿ ಇಂದು ಸಂಜೆ 7.30 ರಿಂದ 'ಸುಗಮ ಸಂಗೀತ ರಸ ಸಂಜೆ ಹಾಗೂ ವಾದ್ಯ ಸಂಗೀತ ವೈಭವ' ಕಾರ್ಯಕ್ರಮ ಶ್ರೀಮತಿ ನಾಗಚಂದ್ರಿಕಾ ಭಟ್ ಮತ್ತು ತಂಡದವರಿಂದ (ಬೆಂಗಳೂರು) ನಡೆಯುವುದು.

## ನೀರಿನಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ದಾವಣಗೆರೆ, ಸೆ.2- ಈಜಲು ಹೋಗಿ ವಿದ್ಯಾರ್ಥಿಯೋರ್ವ ನೀರಿ ನಲ್ಲಿ ಮುಳುಗಿ ಸಾವಿಗೀಡಾಗಿರುವ ಘಟನೆ ನಗರದ ಹೊಂಡದ ವೃತ್ತದಲ್ಲಿರುವ ಕಲ್ಯಾಣಿಯಲ್ಲಿ ಇಂದು ಬೆಳಿಗ್ಗೆ ನಡೆದಿದೆ.

ಬೂದಾಳ್ ರಸ್ತೆಯ ಅಂಜಿನಪ್ಪ ಎಂಬುವರ ಮಗ ಶಂಕರ್ (17) ಮೃತಪಟ್ಟ ವಿದ್ಯಾರ್ಥಿ. ಅಂಜಿನಪ್ಪ ಎಪಿಎಂಸಿಯಲ್ಲಿ ಹಮಾಲಿ ಕಾರ್ಮಿಕರು. ಮಗ ಶಂಕರ್ ನಗರದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದ. ನೀರಿನ ಆಳ ಹೆಚ್ಚಾಗಿತ್ತು. ಈಜಲು ಹೋಗಿದ್ದ ಶಂಕರ್ ಆಕಸ್ಮಿಕವಾಗಿ ಮುಳುಗಿದ್ದಾನೆ. ಇದೇ ಸಮಯದಲ್ಲಿ 15ಕ್ಕೂ ಹೆಚ್ಚು ಮಂದಿ ಈಜುತ್ತಿದ್ದರಾದರೂ ಈತನ ರಕ್ಷಣೆ ಕಷ್ಟವಾಗಿದೆ ಎಂದು ಹೇಳಲಾಗಿದೆ. ಈ ಸಂಬಂಧ ಬಸವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಗರಕ್ಕಿಂದು ಜಿಲ್ಲಾ ಉಸ್ತುವಾರಿ ಸಚಿವ



ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ಇಂದು ಬೆಳಿಗ್ಗೆ 10 ಗಂಟೆಗೆ ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ನಡೆಯಲಿರುವ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವರು.

ನಂತರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು.






# ನಾಡಿದ್ದು ಶ್ರೀಶೈಲ ಶ್ರೀ ದ್ವಾದಶ ಪೀಠಾರೋಹಣ ಉತ್ಸವ

### 3 ದಿನಗಳ ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶ್ರೀಗಳ ಪುಣ್ಯಾರಾಧನೆ ಕಾರ್ಯಕ್ರಮ

ದಾವಣಗೆರೆ, ಸೆ. 2- ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀಶೈಲ ಜಗದ್ಗುರು ಲಿಂಗೈಕ್ಯ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ 36ನೇ ವಾರ್ಷಿಕ ಪುಣ್ಯಾರಾಧನೆ, ಲಿಂಗೈಕ್ಯ ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ 11ನೇ ವರ್ಷದ ಸ್ಮರಣೋತ್ಸವ, ಶ್ರೀ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದ ದ್ವಾದಶ ಪೀಠಾರೋಹಣ ಮಹೋತ್ಸವ ಮತ್ತು ಜನಜಾಗೃತಿ ಧರ್ಮ ಸಮ್ಮೇಳನ ಕಾರ್ಯಕ್ರಮವು ಇದೇ ದಿನಾಂಕ 5, 6, 7 ಮತ್ತು 8ರಂದು ಇಲ್ಲಿನ ವಿನೋಬ ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನ ಕಲಾಪ್ರಕಾಶ ವೃಂದದಲ್ಲಿ ಆಯೋಜಿಸಲಾಗಿದೆ.



**7ರಂದು ಕಾಶೀ ಜಗದ್ಗುರುಗಳ ಪುರ ಪ್ರವೇಶ, ಬೈಕ್ ರ್‍ಯಾಲಿ**

ದಿನಾಂಕ 5ರ ಸೋಮವಾರ ಬೆಳಿಗ್ಗೆ 8ಕ್ಕೆ ಶ್ರೀ ಶೈಲ ಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣವನ್ನು ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ ನೆರವೇರಿಸುವರು.

ಸಂಜೆ 6ಕ್ಕೆ ಶ್ರೀಶೈಲ ಮಠದ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ಹೊನ್ನಾಳಿ ಹಿರೇಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ, ಡಾ. ಎ.ಹೆಚ್. ಶಿವಯೋಗಿ ಸ್ವಾಮಿ, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಎ.ಎಸ್.ವೀರಣ್ಣ, ಡಿ.ಎಂ. ಹಾಲಸ್ವಾಮಿ ಸೇರಿದಂತೆ ಇತರೆ ಗಣ್ಯರು ಆಗಮಿಸಲಿದ್ದಾರೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. (5ನೇ ಪುಟಕ್ಕೆ)

## ಜ್ಯೂನಿಯರ್ ಮಿಸ್ ರಿತನ್ಯ ಎಂ. ಹದಡಿ



ದಾವಣಗೆರೆ, ಸೆ. 2- ಖುಷಿ ಇವೆಂಟ್ ವತಿಯಿಂದ ನಡೆದ ಜ್ಯೂನಿಯರ್ ವಿಭಾಗದ ಮಿಸ್ ದಾವಣಗೆರೆ ಸ್ಪರ್ಧೆಯಲ್ಲಿ ಎರಡನೇ ರನ್ನರ್ ಅಪ್ ಆಗಿ ರಿತನ್ಯ ಎಂ. ಹದಡಿ ಆಯ್ಕೆಯಾಗಿದ್ದಾರೆ.

ರಿತನ್ಯ ನಕ್ಷತ್ರ ಸ್ಕೂಲಿನ ವಿದ್ಯಾರ್ಥಿನಿ ಹಾಗೂ ಕೆ.ಡಿ ಡಾನ್ಸ್ ಕಂಪನಿಯಲ್ಲಿ ನೃತ್ಯ ತರಬೇತಿ ಪಡೆಯುತ್ತಿದ್ದಾರೆ.







## ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

## ಜಿಎಂ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ

ಆಡಳಿತ ಕಛೇರಿ: #652, ಸೂರಜ್ ಆರ್ಕೇಡ್,
ಮಂಡಿಪೇಟೆ, ದಾವಣಗೆರೆ-1



ಜಿಎಂ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ದಾವಣಗೆರೆ, ಇದರ **2021-22ನೇ** ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ: 04-09-2022 ನೇ ಭಾನುವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ನಗರದ ಜಿ.ಎಂ.ಐ.ಟಿ. (ಇಂಜಿನಿಯರಿಂಗ್ ಕಾಲೇಜ್) ಆವರಣದಲ್ಲಿರುವ " ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ "** ಅಧ್ಯಕ್ಷರಾದ **ಶ್ರೀ ಜಿ.ಎಂ.ಪ್ರಸನ್ನಕುಮಾರ್** ಇವರ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ಧರಿಸಿದ್ದು, ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ವಿ.ಸೂ: ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### 2021-22ನೇ ಸಾಲಿನ ಪ್ರಗತಿಯ ಪಕ್ಷಿನೋಟ

ದಿನಾಂಕ: 31-03-2022 ಕ್ಕೆ ಇದ್ದಂತೆ {ಮೊತ್ತ ಕೋಟಿ ರೂ.ಗಳಲ್ಲಿ}

| ಷೇರು ಬಂಡವಾಳ | ಠೇವಣಿಗಳು & ಇತರೆ ನಿಧಿಗಳು | ಠೇವಣಿಗಳು |
|---|---|---|
| ₹ 7.34 | ₹ 10.35 | ₹ 168.28 |
| **ದುಡಿಯುವ ಬಂಡವಾಳ** | **ಸಾಲ ಮತ್ತು ಮುಂಗಡಗಳು** | **ನಿವ್ವಳ ಲಾಭ** |
| ₹ 185.97 | ₹ 130.45 | ₹ 2.44 |

ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರುಗಳು ಪ್ರಧಾನ ವ್ಯವಸ್ಥಾಪಕರು





ಮಾಯಕೊಂಡ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
**ಸನ್ಮಾನ್ಯ ಪ್ರೊ. ಎನ್. ಲಿಂಗಣ್ಣ** ಇವರ ಶಿಫಾರಸ್ಸಿನ ಮೇರೆಗೆ
ಲೋಕೋಪಯೋಗಿ ಇಲಾಖೆಯ ಎಸ್.ಹೆಚ್.ಡಿ.ಪಿ : ಹಂತ-4, ಘಟ್ಟ-2ರ
ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಕಾಮಗಾರಿಯ

## ಶಂಕುಸ್ಥಾಪನೆ ಸಮಾರಂಭ

**ದಿನಾಂಕ 03.09.2022ನೇ ಶನಿವಾರ**



### ಕಾಮಗಾರಿಗಳ ವಿವರ :

1) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು ಆಲೂರುಹಟ್ಟಿ-ಆನಗೋಡು ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 0.00 ರಿಂದ 10.00ರವರೆಗೆ (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿ ಕಾಮಗಾರಿ.
ಅಂದಾಜು ಮೊತ್ತ ರೂ. 900 ಲಕ್ಷಗಳು
**ಸ್ಥಳ : ತುಂಬಿಗೆರೆ**
**ಸಮಯ : ಬೆಳಿಗ್ಗೆ 12.00 ಗಂಟೆಗೆ**

2) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು ಮಂಡ್ಯ-ಹಡಗಲಿ ರಾಜ್ಯ ಹೆದ್ದಾರಿ-47 ರಸ್ತೆಯ ಕಿ.ಮೀ. 261.25 ರಿಂದ 293.83ರ ವರೆಗೆ (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿ ಕಾಮಗಾರಿ.
ಅಂದಾಜು ಮೊತ್ತ ರೂ. 1350.00 ಲಕ್ಷಗಳು
**ಸ್ಥಳ : ನೇರ್ಲಿಗೆ**
**ಸಮಯ : ಬೆಳಿಗ್ಗೆ 12.30 ಗಂಟೆಗೆ**



ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಈ ಭಾಗದ ಎಲ್ಲಾ ಜನಪ್ರತಿನಿಧಿಗಳಿಗೂ, ಗ್ರಾಮಸ್ಥರುಗಳಿಗೂ, ಅಭಿಮಾನಿಗಳಿಗೂ, ಅಧಿಕಾರಿಗಳಿಗೂ, ಸರ್ವರಿಗೂ
**ಹೃತ್ಪೂರ್ವಕ ಸುಸ್ವಾಗತ**





ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಮಾನ್ಯ ಹಾಲಿ ಶಾಸಕರೂ,
ಮಾಜಿ ಸಚಿವರಾದ **ಶ್ರೀ ಎಸ್.ಎ. ರವೀಂದ್ರನಾಥ್** ಇವರ ಶಿಫಾರಸ್ಸಿನ ಮೇರೆಗೆ
2021-22ನೇ ಸಾಲಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ ದಾವಣಗೆರೆ ವಿಭಾಗದ ಲೆಕ್ಕಶೀರ್ಷಿಕೆ
4059 ಇಲಾಖಾ ಕಟ್ಟಡಗಳು ಅಡಿಯಲ್ಲಿನ ಅಂದಾಜು ಮೊತ್ತ ರೂ. 300 ಲಕ್ಷಗಳ

## ಕಾಮಗಾರಿಗಳ ಶಂಕುಸ್ಥಾಪನೆ

ದಿನಾಂಕ 03.09.2022ನೇ ಶನಿವಾರ
ಸಮಯ : ಬೆಳಿಗ್ಗೆ 10.30 ಗಂಟೆಗೆ, ಸ್ಥಳ : ನೀಲಾನಹಳ್ಳಿ



1) ದಾವಣಗೆರೆ ನಗರದ ಎಸ್.ಎಂ ಬಡಾವಣೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2 ಕೊಠಡಿಗಳ ನಿರ್ಮಾಣ.
ಅಂದಾಜು ಮೊತ್ತ ರೂ 35.00 ಲಕ್ಷ

2) ದಾವಣಗೆರೆ ನಗರದ ಬಿ.ಕಾಂಪ್-1 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2 ಕೊಠಡಿಗಳ ನಿರ್ಮಾಣ.
ಅಂದಾಜು ಮೊತ್ತ ರೂ 35.00 ಲಕ್ಷ.

3) ದಾವಣಗೆರೆ ನಗರದ ಹಳೇ ಚಿಕ್ಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2 ಕೊಠಡಿಗಳ ನಿರ್ಮಾಣ.
ಅಂದಾಜು ಮೊತ್ತ ರೂ 40.00 ಲಕ್ಷ.

4) ದಾವಣಗೆರೆ ನಗರದ ಬಿ.ಕ್ಯಾಂಪ್-2 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2 ಕೊಠಡಿಗಳ ನಿರ್ಮಾಣ.
ಅಂದಾಜು ಮೊತ್ತ ರೂ 40.00 ಲಕ್ಷ.

5) ದಾವಣಗೆರೆ ನಗರದ ಆಂಜನೇಯ ಮಿಲ್ ಬಡಾವಣೆ ಬಾಡಾ ರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1 ಕೊಠಡಿ ನಿರ್ಮಾಣ. (ಮೊದಲನೇ ಮಹಡಿ)
ಅಂದಾಜು ಮೊತ್ತ ರೂ 15.00 ಲಕ್ಷ

6) ದಾವಣಗೆರೆ ತಾಲ್ಲೂಕು ಮಲ್ಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2 ಕೊಠಡಿಗಳ ನಿರ್ಮಾಣ
ಅಂದಾಜು ಮೊತ್ತ ರೂ 30.00 ಲಕ್ಷ

7) ದಾವಣಗೆರೆ ತಾಲ್ಲೂಕು ನೀಲಾನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2 ಕೊಠಡಿಗಳ ನಿರ್ಮಾಣ.
ಅಂದಾಜು ಮೊತ್ತ ರೂ 35.00 ಲಕ್ಷ.

8) ದಾವಣಗೆರೆ ತಾಲ್ಲೂಕು ಕಡ್ಲೇಬಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 3 ಕೊಠಡಿಗಳ ನಿರ್ಮಾಣ.
ಅಂದಾಜು ಮೊತ್ತ ರೂ 50.00 ಲಕ್ಷ.

9) ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಶೌಚಾಲಯ ನಿರ್ಮಾಣ.
ಅಂದಾಜು ಮೊತ್ತ ರೂ 20.00 ಲಕ್ಷ



ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಈ ಭಾಗದ ಎಲ್ಲಾ ಜನಪ್ರತಿನಿಧಿಗಳಿಗೂ, ಗ್ರಾಮಸ್ಥರುಗಳಿಗೂ, ಅಭಿಮಾನಿಗಳಿಗೂ, ಅಧಿಕಾರಿಗಳಿಗೂ, ಸರ್ವರಿಗೂ **ಹೃತ್ಪೂರ್ವಕ ಸುಸ್ವಾಗತ**

ಶಾಲಾಭಿವೃದ್ಧಿ ಸಮಿತಿ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು,
**ಹಳೇಬಾತಿ, ದೊಡ್ಡಬಾತಿ, ಕಡ್ಲೇಬಾಳು, ಆಲೂರು ಮತ್ತು ಗ್ರಾಮಸ್ಥರು, ನೀಲಾನಹಳ್ಳಿ.**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte